# ಅಧ್ಯಾಯ-1

## ಪೀಠಿಕೆ, ಅಗತ್ಯತೆ/ ಸಮರ್ಥನೆ, ಔಷಧಿ ಬೆಳೆಗಳ ಮಂಡಳಿ

## 1. ಪೀಠಿಕೆ

ಔಷಧಿ ಬೆಳೆಗಳು ನಮ್ಮ ಸಾಂಪ್ರದಾಯಿಕ ಸ್ವದೇಶಿ ಆರೋಗ್ಯ ಪಾಲನಾ ಕ್ಷೇತ್ರದ ಪ್ರಮುಖ ಸಂಪನ್ಮೂಲ ಆಧಾರಗಳಾಗಿವೆ. ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಆಯುಷ್ ವಿಧಾನ ಚಿಕಿತ್ಸೆ ಹೆಚ್ಚು ಜನಪ್ರಿಯ ಮತ್ತು ಪರಿಣಾಮಕಾರಿಯಾಗಬೇಕಾದಲ್ಲಿ, ಔಷಧಿ ಕ್ಷೇತ್ರಕ್ಕೆ ಸರಾಗ ಮತ್ತು ನಿಯಮಿತವಾಗಿ ಸಸ್ಯ ಮೂಲದ ಗುಣಮಟ್ಟದ ಕಚ್ಚಾ ಸಾಮಗ್ರಿ ಪೂರೈಕೆ ಮೇಲೆ ಅವಲಂಭಿತವಾಗಿರುತ್ತದೆ. ಕ್ಷೇತ್ರದ ಒಟ್ಟು ಅವಶ್ಯಕತೆಯ ಶೇ.90 ರಷ್ಟು ಪ್ರಭೇದಗಳನ್ನು, ಅರಣ್ಯ ಮೂಲಗಳಿಂದಲೇ ಪಡೆಯಲಾಗುತ್ತಿದ್ದು, ಅವುಗಳ ಪೈಕಿ 2/3 ಭಾಗದಷ್ಟು ಸಸ್ಯ ಮೂಲದ ಕಚ್ಚಾ ಸಾಮಗ್ರಿಗಳನ್ನು ಅವೈಜ್ಞಾನಿಕ ವಿಧಾನಗಳಿಂದಲೇ ಕೊಯ್ಲುಮಾಡಿ ಪೂರೈಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ, ಔಷಧಿ ಬೆಳೆಗಳ ಸಾಗುವಳಿಯು ಆಯುಷ್ ಕ್ಷೇತ್ರದ ಕಚ್ಚಾ ಸಾಮಗ್ರಿ ಅವಶ್ಯಕತೆ ಪೂರೈಸುವಲ್ಲಿ ಪ್ರಮುಖ ಅಂಶವಾಗಿರುತ್ತದೆ. ಜೊತೆಗೆ ಇದು ಬೆಳೆ ವೈವಿಧ್ಯತೆ ಕಾಪಾಡುವುದು, ರಫ್ತು ಹೆಚ್ಚಿಸುವುದು ಮತ್ತು ಬೆಳೆಗಾರರ ಆಧಾಯ ಹೆಚ್ಚಿಸಲು ಅನುವಾಗುತ್ತದೆ. ಭಾರತದಿಂದ ರಫ್ತಾಗುತ್ತಿರುವ ಸಸ್ಯ ಮೂಲದ ಆಯುಷ್ ರಫ್ತು ಪದಾರ್ಥಗಳಲ್ಲಿ, ಶೇ.60-70 ರಷ್ಟು ಪ್ರಮಾಣವು ಮೂಲ ಗಿಡಮೂಲಿಕೆ ಅಥವಾ ಗಿಡಮೂಲಿಕೆಯ ರಸಸಾರದ ರೂಪದಲ್ಲಿರುತ್ತದೆ. 2004-05ನೇ ವರ್ಷದಲ್ಲಿ ಭಾರತದಿಂದ Senna ಮತ್ತು Isabgol ಈ ಎರಡೇ ಬೆಳೆಗಳ ರಫ್ತಿನ ಪ್ರಮಾಣ ಕಚ್ಚಾ ರೂಪದಲ್ಲಿ 40,000 ಮೆಟ್ರಿಕ್ ಟನ್‌ಗಳಾಗಿತ್ತು. ಸಂರಕ್ಷಣಾ ಘಟಕಗಳ ಅಭಿವೃದ್ಧಿ, ಖಾತರಿಪಡಿಸಿದ ಗುಣಮಟ್ಟ ಕಾಪಾಡುವುದು ಬ್ರಾಂಡ್ ಅಭಿವೃದ್ಧಿಪಡಿಸುವುದು, ಮೌಲ್ಯವರ್ಧಿತ ಪದಾರ್ಥಗಳ ರಫ್ತಿಗೆ ಅವಶ್ಯವಾಗಿರುವ ಅಂಶಗಳಾಗಿವೆ. ಅರಣ್ಯ ಮೂಲದ ಸ್ವಾಭಾವಿಕ ಮೂಲಗಳ ನಾಶ ಹಾಗೂ ವಿನಾಶವಾಗುತ್ತಿರುವ ಪ್ರಬೇಧಗಳು, ಈ ಕಾರಣಗಳ ಜೊತೆಗೆ, ಗುಣಮಟ್ಟ ಕಾಪಾಡುವುದು ಮತ್ತು ಇದರ ಮಾಪನ ನಿರ್ದಿಷ್ಟಪಡಿಸುವುದಕ್ಕಾಗಿ, ಔಷಧಿ ಬೆಳೆಗಳ ಸಾಗುವಳಿ ಅವಶ್ಯಕತೆಯಿರುತ್ತದೆ. ಇದನ್ನು ಮೂಲಭೂತ ಸೌಕರ್ಯ ಮತ್ತು ಮಾರುಕಟ್ಟೆ ವ್ಯವಸ್ಥೆಗೆ ಹಣಕಾಸು ನೆರವನ್ನು ಒದಗಿಸುವ ಕಾರ್ಯನೀತಿಗಳ ಮೂಲಕ ಸಾಧಿಸಬಹುದಾಗಿರುತ್ತದೆ.

## 2. ಅಗತ್ಯತೆ ಮತ್ತು ಸಮರ್ಥನೆ

1. ಆಯುಷ್ ಕ್ಷೇತ್ರದ ಕಚ್ಚಾ ಸಾಮಗ್ರಿಯ ಒಟ್ಟು ಬೇಡಿಕೆಯ ಪೈಕಿ ಶೇ.95 ರಷ್ಟು ಸಸ್ಯ ಮೂಲಗಳ ಮೇಲೆ ಅವಲಂಭಿತವಾಗಿದ್ದು, ಕಚ್ಚಾ ಸಾಮಗ್ರಿ ಅವಶ್ಯಕತೆಗೆ ಅರಣ್ಯ ಮೂಲಗಳನ್ನೇ ಅವಲಂಭಿಸುವುದರ ಬದಲು, ಈ ಔಷಧಿ ಬೆಳೆಗಳ ಸಾಗುವಳಿ ಹೆಚ್ಚಿಸುವುದರ ಮೂಲಕ, ಕ್ಷೇತ್ರದ ಕಚ್ಚಾ ಸಾಮಗ್ರಿ ಪೂರೈಕೆಯಲ್ಲಿ ಸ್ಥಿರತೆಯನ್ನು ಕಾಪಾಡುವುದು.
2. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಿಸಲು, ವಿಷಪೂರಿತ ಮಲಿನತೆ ಮತ್ತು ಭಾರಿ ಲೋಹಗಳಿಂದ ಮುಕ್ತವಾದ, ನಿರ್ದಿಷ್ಟ ಮಾಪನದ ಮತ್ತು ಶ್ರೇಷ್ಠ ಗುಣಮಟ್ಟದ ಸಸ್ಯ ರಾಸಾಯನಿಕ ಸಂಯುಕ್ತಗಳನ್ನು ಹೊಂದಿದ ಪದಾರ್ಥಗಳನ್ನು ಉತ್ಪಾದಿಸಬೇಕಾಗುತ್ತದೆ. ಇದಕ್ಕಾಗಿ ಸಾವಯವ ವಿಧಾನ ಮತ್ತು ಶ್ರೇಷ್ಠ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡು ಸಾಗುವಳಿ ಮೂಲಕ, ಔಷಧಿ ಬೆಳೆಗಳನ್ನು ಉತ್ಪಾದಿಸಬೇಕಾಗುತ್ತದೆ.
3. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಸ್ಯ ಮೂಲದ ಔಷಧಿ ಮೂಲಿಕೆಗಳ ವ್ಯವಹಾರದಲ್ಲಿ ಭಾರತದ ಪಾಲು ಶೇ.1 ರಷ್ಟು ಮಾತ್ರ. ಇದರ ಪೈಕಿ 2/3 ರಷ್ಟು ಪಾಲು ರಫ್ತು, ಕಚ್ಚಾ ಗಿಡಮೂಲಿಕೆಗಳ ರೂಪದ್ದಾಗಿರುತ್ತದೆ. ಆದರೆ ಅಮೇರಿಕ ರಾಷ್ಟ್ರ ಒಂದೇ ಈ ಕ್ಷೇತ್ರದಲ್ಲಿ 120 ಬಿಲಿಯನ್ ಅಮೇರಿಕನ್ ಡಾಲರ್ ಮೌಲ್ಯದ ವ್ಯವಹಾರ ನಡೆಸುತ್ತಿದೆ. ಈ ಕಾರಣದಿಂದ ಔಷಧಿ ಬೆಳೆಗಳ ಗೊಂಚಲು ಸಾಗುವಳಿಗೆ ಉತ್ತೇಜನ ನೀಡಿ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಚಟುವಟಿಕೆಗಳೊಂದಿಗೆ ಸಂಪರ್ಕ ಕಲ್ಪಿಸಿ, ಆಯುಷ್ ಕ್ಷೇತ್ರದ ಆಂತರಿಕ ಬೇಡಿಕೆ ಮತ್ತು ರಫ್ತು ಬೇಡಿಕೆಯ ಲಾಭವನ್ನು ಪಡೆಯಬಹುದು.

## 3. ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ

ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯನ್ನು ಭಾರತ ಸರ್ಕಾರದ ದಿನಾಂಕ:24-11-2000 ರ ಠರಾವಿನ ಪ್ರಕಾರ, ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಗಿರುತ್ತದೆ. ಔಷಧಿ ಬೆಳೆಗಳಿಗೆ ಸಂಬಂಧಪಟ್ಟ ಎಲ್ಲಾ ಚಟುವಟಿಕೆಗಳ ಸಮನ್ವಯದ ಜವಾಬ್ದಾರಿ ಮಂಡಳಿಯದ್ದಾಗಿರುತ್ತದೆ. ಔಷಧಿ ಬೆಳೆಗಳ ಕುರಿತ ಕಾರ್ಯ ನೀತಿ ರೂಪಿಸುವುದು, ಪ್ರಭೇದಗಳ ಸಂರಕ್ಷಣೆಗೆ ರಣ ನೀತಿ ರೂಪಿಸುವುದು, ಕಡಿಮೆ ಖರ್ಚಿನಲ್ಲಿ ಲಾಭದಾಯಕ ಸಾಗುವಳಿ, ವೈಜ್ಞಾನಿಕ ಕೊಯ್ಲು ವಿಧಾನಗಳು, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ವ್ಯವಸ್ಥಿತ ಮಾರುಕಟ್ಟೆ ವ್ಯವಸ್ಥೆ, ಸಂಶೋಧನೆ ಇತ್ಯಾದಿ ಚಟುವಟಿಕೆಗಳ ಅಭಿವೃದ್ಧಿಯ ಉದ್ದೇಶವನ್ನು ಮಂಡಳಿ ಹೊಂದಿರುತ್ತದೆ. ಔಷಧಿ ಬೆಳೆಗಳಿಗೆ ಸಂಬಂಧಪಟ್ಟಂತೆ ವಿವಿಧ ಸಚಿವಾಲಯಗಳು ಮತ್ತು ಇಲಾಖೆಗಳಾದ ಅರಣ ಮತ್ತು ಪರಿಸರ, ಕೃಷಿ, ವಾಣಿಜ್ಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳೊಂದಿಗೆ ಹಾಗೂ ರಾಜ್ಯ / ಕೇಂದ್ರಾಡಳಿತ ಸರ್ಕಾರಗಳು/ ಮಂಡಳಿಗಳು/ ಸಂಸ್ಥೆಗಳೊಂದಿಗೆ ಸಮನ್ವಯಿಸುವ ಕರ್ತವ್ಯ ನಿಭಾಯಿಸುತ್ತದೆ.

### 3. A. ಮಂಡಳಿಯ ಕರ್ತವ್ಯಗಳು

- ಔಷಧಿ ಬೆಳೆಗಳ ಕುರಿತ, ದೇಶದ ಒಳಗೆ ಮತ್ತು ಹೊರಗಿನ ಬೇಡಿಕೆ / ವಿತರಣೆ ಸ್ಥಿತಿಗತಿಗಳನ್ನು ಅಂದಾಜಿಸುವುದು.
- ಔಷಧಿ ಬೆಳೆಗಳ ಕ್ಷೇತ್ರದ ಅಭಿವೃದ್ಧಿ ಕುರಿತ ಸರ್ಕಾರದ ಕಾರ್ಯನೀತಿ, ಕಾರ್ಯಕ್ರಮ ಮತ್ತು ಯೋಜನೆಗಳ ಬಗ್ಗೆ, ವಿವಿಧ ಸಚಿವಾಲಯಗಳು/ ಇಲಾಖೆಗಳು/ ಸಂಸ್ಥೆಗಳು/ರಾಜ್ಯ/ಕೇಂದ್ರಾಡಳಿತ ಸರ್ಕಾರಗಳಿಗೆ ಸಲಹೆ ನೀಡುವುದು.
- ಔಷಧಿ ಬೆಳೆಗಳ ಸಾಗುವಳಿ, ಮೂಲಭೂತ ಸೌಕರ್ಯ ಅಭಿವೃದ್ಧಿ, ಸಂಸ್ಕರಣೆ, ಮಾರುಕಟ್ಟೆ ಅಭಿವೃದ್ಧಿ ಇತ್ಯಾದಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವ ವಿವಿಧ ಏಜೆನ್ಸಿಗಳಿಗೆ, ಯೋಜನಾ ವರದಿ ಮತ್ತು ಕಾರ್ಯಕ್ರಮ ರೂಪಿಸುವಲ್ಲಿ ಸಲಹೆ/ ಸಹಕಾರ ನೀಡುವುದು.
- ಔಷಧಿ ಬೆಳೆಗಳ ವೈಜ್ಞಾನಿಕ ಗುರುತಿಸುವಿಕೆ, ಅವುಗಳ ಪ್ರದೇಶ ಮತ್ತು ಉತ್ಪಾದನೆಯ ಪರಿಮಾಣೀಕರಣ, ಬೆಳೆಗಳ ತಪಶೀಲು ಪಟ್ಟಿ ತಯಾರಿ ಮತ್ತು ದಾಖಲೀಕರಣ ಮಾಡುವುದು.
- ಔಷಧಿ ಬೆಳೆಗಳ ಸಾಗುವಳಿ ಮತ್ತು ಸಂರಕ್ಷಣೆ ಉತ್ತೇಜಿಸುವುದು.
- ಬೆಳೆಗಾರರು ಮತ್ತು ಸಂಗ್ರಹಗಾರರ ಮಧ್ಯೆ ಸಹಕಾರ ಉತ್ತೇಜಿಸುವುದು, ಉತ್ಪಾದನೆಯನ್ನು ಕೆಡದಂತೆ ಶೇಖರಿಸಿ/ಸಾಗಾಣಿಕೆ ಮಾಡಿ, ಉತ್ತಮ ರೀತಿಯ ಮಾರುಕಟ್ಟೆ ವ್ಯವಸ್ಥೆಗೆ ಸಹಕರಿಸುವುದು.
- ಔಷಧಿ ಬೆಳೆಗಾರರ ದತ್ತಾಂಶ ಅಭಿವೃದ್ಧಿಪಡಿಸುವುದು, ಅವುಗಳ ಮಾಹಿತಿ ಬಗ್ಗೆ ಪ್ರಚಾರ ನೀಡುವುದು ಮತ್ತು ಸಾಂಪ್ರದಾಯಿಕ ಆಯುಷ್‌ನಲ್ಲಿ ಬಳಸುವ ಗಿಡಮೂಲಿಕೆಗಳ ಸ್ವಾಮ್ಯ ಸನದು (Patent) ತಡೆಹಿಡಿಯುವುದು.
- ಕಚ್ಚಾ ಸಾಮಗ್ರಿಗಳು ಮತ್ತು ಮೌಲ್ಯವರ್ಧಿತ ಪದಾರ್ಥ (ಔಷಧಿ/ಆಹಾರ ಸಂಬಂಧಿತ/ ಗಿಡಮೂಲಿಕೆ ಆಧಾರಿತ ಸೌಂದರ್ಯವರ್ಧಕಗಳು) ಗಳ ಆಮದು / ರಫ್ತು ವ್ಯವಹಾರ ನೋಡಿಕೊಳ್ಳುವುದು.
- ಉತ್ತಮ ತಾಂತ್ರಿಕತೆ ಬಳಸಿ ಔಷಧಿ ಪದಾರ್ಥಗಳ ಮಾರುಕಟ್ಟೆ ವ್ಯವಸ್ಥೆ, ರಾಷ್ಟ್ರ/ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗುಣಮಟ್ಟ / ಗುಣಮಟ್ಟದ ಭರವಸೆ ಕಾಪಾಡುವುದು.
- ವೈಜ್ಞಾನಿಕ ಮತ್ತು ತಂತ್ರಜ್ಞಾನಿಕ ಸಂಶೋಧನೆ / ಅಧ್ಯಯನ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳುವುದು ಮತ್ತು ಇತರೆ ಅರ್ಹ ಸಂಸ್ಥೆಗಳ ಮುಖೇನ ಕಾರ್ಯಗತಗೊಳಿಸುವುದು.
- ಸಾಗುವಳಿ ಮತ್ತು ಗುಣಮಟ್ಟ ನಿಯಂತ್ರಣಕ್ಕೆ ವಿಧಿ ವಿಧಾನಗಳನ್ನು ಅಭಿವೃದ್ಧಿಪಡಿಸುವುದು.
- ಸ್ವಾಮ್ಯ ಸನದು (Patent) / ಭೌದ್ಧಿಕ ಆಸ್ತಿ (Intellectural Property Rights) ಹಕ್ಕುಗಳ ಸಂರಕ್ಷಣೆಯನ್ನು ಉತ್ತೇಜಿಸುವುದು.

**3. B. ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯ ರಚನೆ**

| | | |
|---|---|---|
| 1. | ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು | : ಅಧ್ಯಕ್ಷರು |
| 2. | ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು | : ಉಪಾಧ್ಯಕ್ಷರು |
| 3. | ಆಯುಷ್, ಪರಿಸರ ಮತ್ತು ಅರಣ್ಯ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ವಾಣಿಜ್ಯ, ಕೈಗಾರಿಕೆ, ಕೃಷಿ ಮತ್ತು ಸಹಕಾರ ವಿಭಾಗ, ಕೃಷಿ ಸಂಶೋಧನೆ ಮತ್ತು ಶಿಕ್ಷಣ, ಪರಿಶಿಷ್ಟ ಪಂಗಡ ಇಲಾಖೆ, ಪ್ರವಾಸೋಧ್ಯಮ ಇಲಾಖೆ, ಈಶಾನ್ಯ ರಾಜ್ಯಗಳ ಅಭಿವೃದ್ಧಿ ಇಲಾಖೆ, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆಗಳ ಕಾರ್ಯದರ್ಶಿಗಳು | : ಸದಸ್ಯರುಗಳು |
| 4. | (a) ಔಷಧಿ ಬೆಳೆಗಳ ಸಸ್ಯಶಾಸ್ತ್ರ, (b) ಔಷಧಿ ಔದ್ಯೋಗಿಕ ಕ್ಷೇತ್ರ, (c) ಔಷಧಿ ಸಂಬಂಧಿತ ಮಾರುಕಟ್ಟೆಮತ್ತು ವ್ಯಾಪಾರ ಕ್ಷೇತ್ರ,(d) ಕಾನೂನು ಮತ್ತು ಸ್ವಾಮ್ಯ ಸನದು ಕ್ಷೇತ್ರ,ಗಳಲ್ಲಿ ಪರಿಣಿತಿ ಹೊಂದಿದ (ಪ್ರತಿ ಕ್ಷೇತ್ರದಿಂದ ಒಬ್ಬರಂತೆ)ಒಟ್ಟು ನಾಲ್ಕು ಜನ ನಾಮ ನಿರ್ದೇಶಿತ ಪರಿಣಿತರು | : ಸದಸ್ಯರುಗಳು |
| 5. | (a) ಭಾರತೀಯ ಔಷಧಿ ಪದ್ಧತಿ ಮತ್ತು ಹೋಮಿಯೋಪತಿ ಔಷಧಿಗಳ ರಫ್ತುದಾರರ ಪ್ರತಿನಿಧಿ (b) ಔಷಧಿ ಬೆಳೆಗಳ ಕ್ಷೇತ್ರದಲ್ಲಿ ಸಾಧನೆ ಮಾಡಿದ ನರ್ಸರಿ/(ಪ್ರಚಾರ,ಸಾಗುವಳಿಗೆ ಉತ್ತೇಜನ ಇತ್ಯಾದಿ) ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿ (c) ಔಷಧಿ ಬೆಳೆಗಾರರ ಪ್ರತಿನಿದಿ (d) ಔಷಧಿ ಬೆಳೆಗಳ ಸಂಶೋಧನೆ ಮತ್ತು ಅಭಿವೃದ್ಧಿ ಉದ್ಯಮ ಸಮೂಹದ ಪ್ರತಿನಿಧಿ, (ಒಟ್ಟಾರೆ ನಾಲ್ಕು ಪ್ರತಿನಿಧಿಗಳು) | : ಸದಸ್ಯರುಗಳು |
| 6. | ಔಷಧಿ ಬೆಳೆಗಳ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಘ/ಸಂಸ್ಥೆಗಳು/ಸಹಕಾರಿ ಸಂಸ್ಥೆಗಳ ಇಬ್ಬರು ನಾಮ ನಿರ್ದೇಶಿತ ಪರಿಣಿತರು | : ಸದಸ್ಯರು |
| 7. | (a)ಆಯುಷ್ ಇಲಾಖೆಯ ಸಂಶೋಧನಾ ಪರಿಷತ್ತಿನ ಪರಿಣಿತ ಪ್ರತಿನಿಧಿ (b)ಭಾತೀಯ ಔಷಧಿಗಳ ಫಾರ್ಮಾ ಕೋಪಿಯಾ ಪ್ರಯೋಗಾಲಯ/ಹೋಮಿಯೋಪತಿ ಫಾರ್ಮಾ ಕೋಪಿಯಾ ಪ್ರಯೋಗಾಲಯ, ಗಾಜಿಯಾಬಾದ್‌ನ ಪರಿಣಿತ ಪ್ರತಿನಿಧಿಸಲ್ಪಟ್ಟ ರಾಜ್ಯ ಸರ್ಕಾರಗಳ ಇಬ್ಬರು ಪ್ರತಿನಿಧಿಗಳು (ದ್ವೈವಾರ್ಷಿಕ ನಿಯತಾ ವರ್ತನೆ ಆಧಾರದ ಮೇಲೆ –by rotation every two years) | : ಸದಸ್ಯರುಗಳು |
| 8. | ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿ | : ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮತ್ತು ಸದಸ್ಯ ಕಾರ್ಯದರ್ಶಿ |

# ಅಧ್ಯಾಯ-2

## ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ – ಉದ್ದೇಶ, ರಣನೀತಿ, ರಚನೆ, ಏಜೆನ್ಸಿ ಆಯ್ಕೆ:

### 1. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆ

ಹತ್ತನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ, ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ ವತಿಯಿಂದ, **'ಔಷಧಿ ಮಂಡಳಿಗಳ ಸ್ಥಾಪನೆ'** ಎಂಬ ಕೇಂದ್ರ ಪುರಸ್ಕೃತ ಯೋಜನೆ ಅನುಷ್ಠಾನದಲ್ಲಿತ್ತು. 11 ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ, ಈ ಯೋಜನೆಯನ್ನು ಮಾರ್ಪಡಿಸಿ, **'ಕೇಂದ್ರ ಪುರಸ್ಕೃತ ಔಷಧಿ ಬೆಳೆಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ಸ್ಥಿರ ನಿರ್ವಹಣೆ'** ಎಂದು ಪುನರ್‌ನಾಮಕರಣ ಮಾಡಿ, ರೂ.321.30 ಕೋಟಿಗಳ ಅನುದಾನವನ್ನು ಅನುಮೋದಿಸಲಾಗಿರುತ್ತದೆ. ಈ ಯೋಜನೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಪ್ರಮುಖ ಘಟಕಗಳೆಂದರೆ, (a) ಸಂಪನ್ಮೂಲಗಳ ದಾಖಲೀಕರಣಕ್ಕೆ ಉತ್ತೇಜನ, (b) In-Situ ಸಂರಕ್ಷಣೆ, (c) ಅಪರೂಪದ ಮತ್ತು ಅಳಿವಿನಂಚಿನಲ್ಲಿರುವ ಪ್ರಬೇಧಗಳ ಸಂರಕ್ಷಣೆ, (d) ಸಂಶೋಧನೆ ಮತ್ತು ಅಭಿವೃದ್ಧಿ, (e) ಮೌಲ್ಯ ವರ್ಧನೆ ಮತ್ತು ಉಗ್ರಾಣ ಸಂಬಂಧಿತ **'ಜಂಟಿ ಅರಣ್ಯ ನಿರ್ವಹಣಾ ಸಮಿತಿ'** ಗಳಿಗೆ ನೆರವು, (f) ಉತ್ತಮ ಸಂಗ್ರಹಣಾ ಪದ್ಧತಿ ಮತ್ತು ಸ್ಥಿರ ಕೊಯ್ಲು ಪದ್ಧತಿಗಳ ಕುರಿತು ಪ್ರಾಥಮಿಕ ಸಂಗ್ರಹಾಕಾರರ ಮತ್ತು ಅರಣ್ಯವಾಸಿಗಳಿಗೆ ತರಬೇತಿ ನೀಡುವುದು ಮತ್ತು ಸಂಗ್ರಹಣಾ ಸಾಮರ್ಥ್ಯ ವೃದ್ಧಿಸುವುದು. ಆದರೆ **ವಾಣಿಜ್ಯಕ ಉದ್ದೇಶ ಹೊಂದಿದ ಸಾಗುವಳಿ, ಕೊಯ್ಲೋತ್ತರ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ** ಘಟಕಗಳನ್ನು ಈ ಮಾರ್ಪಡಿಸಲ್ಪಟ್ಟ ಯೋಜನೆಯಿಂದ ಬೇರ್ಪಡಿಸಿ, **'ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್'** ಎಂಬ ಹೊಸ ಕೇಂದ್ರ ಪುರಸ್ಕೃತ ಯೋಜನೆಯಡಿ ಸೇರಿಸಲಾಗಿರುತ್ತದೆ. ಈ ಯೋಜನೆಯಡಿ ನರ್ಸರಿಗಳ ಅಭಿವೃದ್ಧಿ, ಔಷಧಿ ಉದ್ಯಮದಲ್ಲಿ ಬೇಡಿಕೆಯಲ್ಲಿರುವ ಔಷಧಿ ಬೆಳೆಗಳ ಸಾಗುವಳಿ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಮಾರುಕಟ್ಟೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸಾವಯವ / GAP ಪ್ರಮಾಣೀಕರಣ, ಗುಣಮಟ್ಟ ನಿರ್ವಹಣೆ ಮತ್ತು ಬೆಳೆ ವಿಮೆ ಘಟಕಗಳಿಗೆ ಉತ್ತೇಜನ ನೀಡಲಾಗುವುದು.

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಯೋಜನೆಯನ್ನು 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಅನುಷ್ಠಾನಗೊಳಿಸಲು ರೂ.630.00 ಕೋಟಿಗಳ ಅನುದಾನಕ್ಕೆ ಅನುಮೋದನೆ ನೀಡಲಾಗಿರುತ್ತದೆ. 11 ನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಕೇಂದ್ರ ಸರ್ಕಾರ, ಯೋಜನೆಯ ಸಂಪೂರ್ಣ ಅನುದಾನವನ್ನು ಭರಿಸಲಿದ್ದು, 12 ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ, ರಾಜ್ಯ ಸರ್ಕಾರಗಳು ತಮ್ಮ ವಂತಿಕೆಯನ್ನು ಪಾವತಿಸಬೇಕಾಗುತ್ತದೆ. ಯೋಜನೆಯನ್ನು ಮಿಷನ್ ಮಾದರಿಯಲ್ಲಿ ವಿವಿಧ ಘಟಕಗಳ ಸಮಗ್ರ ಅನುಷ್ಠಾನದೊಂದಿಗೆ, ಔಷಧಿ ಬೆಳೆಗಳ ಕ್ಷೇತ್ರ ಬೇಡಿಕೆಗೆ ತಕ್ಕಂತೆ ತೀವ್ರಗತಿಯಲ್ಲಿ ಅಭಿವೃದ್ಧಿಗೊಳಿಸುವ ಉದ್ದೇಶ ಹೊಂದಲಾಗಿದೆ.

### 2. ಮಿಷನ್ ಉದ್ದೇಶಗಳು

- ಔಷಧಿ ಬೆಳೆಗಳನ್ನು ಕೃಷಿ ಪದ್ಧತಿಗಳೊಂದಿಗೆ ಸಮಗ್ರ ರೀತಿಯಲ್ಲಿ ವಿಲೀನಗೊಳಿಸಲು, ಅವುಗಳ ಸಾಗುವಳಿಗೆ ಉತ್ತೇಜನ ಒದಗಿಸುವುದರ ಮೂಲಕ, ಆಯುಷ್ ಔಷಧಿ ಪದ್ಧತಿಯ ಗುಣಮಟ್ಟ / ಸಮಗ್ರತೆ/ಪರಿಣಾಮಕತ್ವ ಶಕ್ತಿ/ ಸುರಕ್ಷತೆ ಕಾಪಾಡುವುದು ಮತ್ತು ಆ ಮುಖೇನ ಬೆಳೆ ವೈವಿಧ್ಯತೆ ಹೆಚ್ಚಿಸುವುದು ಹಾಗೂ ರೈತರ ಸ್ಥಿರ ರೀತಿಯಲ್ಲಿ ಆಧಾಯಗಳಿಸುವಿಕೆಗೆ ನೆರವಾಗುವುದು.
- ಉತ್ತಮ ಕೃಷಿ ಪದ್ಧತಿ ಮತ್ತು ಸಂಗ್ರಹಣಾ ಪದ್ಧತಿಗಳನ್ನು ಅಳವಡಿಸಿಕೊಂಡು ಔಷಧಿ ಬೆಳೆಗಳ ಸಾಗುವಳಿಗೆ ಒತ್ತು ನೀಡುವುದರೊಂದಿಗೆ, ಗುಣಮಟ್ಟ ಪ್ರಮಾಣೀಕತೆ ಮತ್ತು ನಿರ್ಧಿಷ್ಟ ಮಾನತೆ (Standardization) ಪಾಲಿಸುವುದು. ಆ ಮುಖೇನ ಆಯುಷ್ ಕ್ಷೇತ್ರದ ಜನಪ್ರಿಯತೆಯನ್ನು

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸಿ, ಔಷಧಿ ಕ್ಷೇತ್ರದ ಮೌಲ್ಯವರ್ಧಿತ ಪದಾರ್ಥ (ಗಿಡಮೂಲಿಕೆ ರಸಸಾರ, ಸಸ್ಯ ಸಂಬಂಧಿತ ರಾಸಾಯನಿಕಗಳು, ಸಸ್ಯ ಮೂಲದ ಔಷಧೀಯ ಆಹಾರ ಪದಾರ್ಥಗಳು, ಸೌಂದರ್ಯವರ್ಧಕ ಔಷಧೀಯ ಪದಾರ್ಥಗಳು ಮತ್ತು ಆಯುಷ್ ಪದಾರ್ಥಗಳು) ಗಳ ರಫ್ತು ಹೆಚ್ಚಿಸುವುದು.

- ಗೊಂಚಲು ಮಾದರಿಯಲ್ಲಿ ಔಷಧಿ ಬೆಳೆಗಳ ಸಾಗುವಳಿ ಅಭಿವೃದ್ಧಿಪಡಿಸುವುದು. ಈ ಗೊಂಚಲುಗಳಲ್ಲಿ ಕೊಯ್ಲೋತ್ತರ/ ಶೇಖರಣಾ ಗೋದಾಮು/ಸಂಸ್ಕರಣಾ/ ಮೌಲ್ಯವರ್ಧನೆ/ ಮಾರುಕಟ್ಟೆ ಸಂಬಂಧಿತ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವುದು.
- ಗುಣಮಟ್ಟ ನಿರ್ದಿಷ್ಟ ಮಾನತೆ, ಉತ್ತಮ ಕೃಷಿ ಪದ್ಧತಿಗಳು, ಉತ್ತಮ ಶೇಖರಣಾ ಪದ್ಧತಿಗಳು ಮತ್ತು ಉತ್ತಮ ಸಂಗ್ರಹಣಾ ಪದ್ಧತಿಗಳ ದಾಖಲೀಕರಣ ಮತ್ತು ದೃಢೀಕರಣ ಪ್ರಕ್ರಿಯೆಗೆ ಉತ್ತೇಜನ ನೀಡುವುದು ಹಾಗೂ ಅನುಷ್ಠಾನಗೊಳಿಸುವುದು.
- ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಮಿಷನ್ ಮಾದರಿಯಲ್ಲಿ, ಸಂಶೋಧನೆ/ ಅಭಿವೃದ್ಧಿ/ ಸಂಸ್ಕರಣೆ/ ಮಾರುಕಟ್ಟೆ ಕ್ಷೇತ್ರಗಳ ಪಾಲುದಾರರ, ಸಾರ್ವಜನಿಕ ಮತ್ತು ಖಾಸಗಿ ಪಾಲುದಾರಿಕೆ / ಸಂಯೋಜಕತ್ವ ಪ್ರೇರೇಪಿಸುವುದು.

## 3. ಮಿಷನ್ ರಣನೀತಿ / ಕಾರ್ಯನೀತಿ (STRATEGY)

- ಉತ್ಪಾದನೆ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ ಮತ್ತು ಮಾರುಕಟ್ಟೆಗಳನ್ನೊಳಗೊಂಡ ಪರಿಪೂರ್ಣ ಕಾರ್ಯನೀತಿಯನ್ನು ಮಿಷನ್ ಅಡಿ ರೂಢಿಸಿಕೊಳ್ಳಲಾಗುವುದು. ಈ ಕಾರ್ಯನೀತಿ ಸಾಧನೆಗೆ, ಗುರುತಿಸಲಾದ ಆಯ್ದ ಗೊಂಚಲುಗಳಲ್ಲಿ ಬೇಡಿಕೆಯಲ್ಲಿರುವ ಔಷದಿ ಬೆಳೆಗಳ ಸಾಗುವಳಿಗೆ ಒತ್ತು ನೀಡಲಾಗುವುದು. ಜೊತೆಗೆ ಉತ್ತಮ ಕೃಷಿ ಪದ್ಧತಿಗಳು ಮತ್ತು ಉತ್ತಮ ಶೇಖರಣಾ ಪದ್ಧತಿಗಳನ್ನಳವಡಿಸಿಕೊಂಡು, ಉತ್ಪಾದನಾ ಚಟುವಟಿಕೆಗಳನ್ನು ಕೊಯ್ಲೋತ್ತರ ಚಟುವಟಿಕೆ (ಸಂಗ್ರಹಣಾ ಗೋದಾಮು, ಸಂಸ್ಕರಣೆ, ಗುಣಮಟ್ಟ ಪರೀಕ್ಷೆ, ದೃಢೀಕರಣ, ಮಾರುಕಟ್ಟೆ ವ್ಯವಸ್ಥೆ) ಗಳೊಂದಿಗೆ ಸಂಯೋಜನೆಗೊಳಿಸುವುದು ಹಾಗೂ ಆ ಮುಖೇನ ಆಯುಷ್ ಕ್ಷೇತ್ರದ ಬೇಡಿಕೆ ಪೂರೈಸುವುದು ಮತ್ತು ಮೌಲ್ಯವರ್ಧಿತ ಪದಾರ್ಥಗಳ ರಫ್ತು ಹೆಚ್ಚಿಸುವುದು.
- ಔಷಧಿ ಬೆಳೆಗಳ ಸಾಗುವಳಿಯನ್ನು ಹೆಚ್ಚಿಸುವುದರ ಮೂಲಕ, ರೈತರಿಗೆ ಇದು ಪರ್ಯಾಯ ಕೃಷಿ ಪದ್ಧತಿಯಾಗಿ ರೂಪುಗೊಳ್ಳಲು ನೆರವು ನೀಡುವುದು. ಇದಕ್ಕಾಗಿ ಉತ್ಪಾದನಾ ಚಟುವಟಿಕೆಗಳನ್ನು ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಮತ್ತು ಗುಣಮಟ್ಟ ಪರೀಕ್ಷೆ ಘಟಕಗಳೊಂದಿಗೆ ಸಂಯೋಜನೆಗೊಳಿಸುವುದು. ಇದರಿಂದ ರೈತರಿಗೆ ಉತ್ತಮ ಲಾಭ ದೊರೆಯುವುದಲ್ಲದೇ ಕಚ್ಚಾ ಪದಾರ್ಥಗಳ ಪೂರೈಕೆಗೆ ಅರಣ್ಯಗಳ ಮೇಲಿನ ಅವಲಂಭನೆಯನ್ನು ಕಡಿಮೆ ಮಾಡಬಹುದು.
- (a) ಔಷಧಿ ಬೆಳೆಗಳ ಸಾಗುವಳಿಯನ್ನು ಕೃಷಿ ಪದ್ಧತಿ / ತೋಟಗಾರಿಕೆ ಪದ್ಧತಿಗಳೊಂದಿಗೆ ಸಂಯೋಜಿಸುವ ಪ್ರಾಯೋಗಿಕ ತಂತ್ರಜ್ಞಾನ ಹಾಗೂ (b) ಉತ್ಪಾದನಾ ಹಂತ ಮತ್ತು ಕೊಯ್ಲೋತ್ತರ ಹಂತಗಳಲ್ಲಿ ಗುಣಮಟ್ಟ ಮತ್ತು ನಿರ್ದಿಷ್ಟ ಮಾನತೆ ಕಾಪಾಡುವ ವಿಧಾನಗಳ ಕುರಿತು ಮಾಧ್ಯಮಗಳ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ನಿರಂತರ ಪ್ರಚಾರ ನೀಡುವುದು. ಆ ಮುಖೇನ ಯೋಜನೆಯ ಫಲ ಹೆಚ್ಚು ಫಲಾನುಭವಿಗಳನ್ನು ತಲುಪುವಂತೆ ಮಾಡುವುದು.
- ಸ್ವಸಹಾಯ ಗುಂಪುಗಳು/ ಬೆಳೆಗಾರರ ಸಂಘಗಳು/ಸಹಕಾರಿ ಸಂಘಗಳು/ಉತ್ಪಾದಕರ ಕಂಪನಿಗಳನ್ನು ತೊಡಗಿಸಿಕೊಂಡು, ಬೆಳೆಗಾರರನ್ನು ವ್ಯಾಪಾರಿಗಳು/ ತಯಾರಿಕಾದಾರರು/ ಸಂಶೋಧನೆ/ ಅಭಿವೃದ್ಧಿ ಸಂಸ್ಥೆಗಳೊಂದಿಗೆ ಉಪಯುಕ್ತಕಾರಿ ಸಂಪರ್ಕ ಕಲ್ಪಿಸಿ, ಸಾಗುವಳಿ ಮತ್ತು ಸಂಸ್ಕರಣಾ ಚಟುವಟಿಕೆಗಳನ್ನು ಗುಂಪು/ ಗೊಂಚಲು ಮಾದರಿಯಲ್ಲಿ ಅಭಿವೃದ್ಧಿಗೊಳಿಸುವುದು.

# 4. ಮಿಷನ್ ರಚನೆ

## 4A. ರಾಷ್ಟ್ರಮಟ್ಟದ ಶ್ರೇಣಿ

ರಾಷ್ಟ್ರಮಟ್ಟದ ಮಿಷನ್ ಕೇಂದ್ರ ಕಛೇರಿ ಆಯುಷ್ ಇಲಾಖೆ, ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ, ನವದೆಹಲಿಯಲ್ಲಿ ಕರ್ತವ್ಯ ನಿರ್ವಹಿಸುತ್ತದೆ. ಮಿಷನ್ ಕಾರ್ಯಾನುಷ್ಠಾನ ರಚನೆ, ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಎರಡು ಶ್ರೇಣಿಗಳನ್ನು ಹೊಂದಿರುತ್ತದೆ.

**ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ:** ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ, ಔಷಧಿ ಬೆಳೆಗಳ ಮಿಷನ್‌ಗೆ **ಸಾಮಾನ್ಯ ಪರಿಷತ್ತು** ಆಗಿ ಕರ್ತವ್ಯ ನಿರ್ವಹಿಸುತ್ತದೆ. ಈ ಪರಿಷತ್ತಿಗೆ ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಅಧ್ಯಕ್ಷರಾಗಿರುತ್ತಾರೆ. ಇದಲ್ಲದೇ ಮಂಡಳಿಯಡಿ ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳಲು **ಹಣಕಾಸು ಸ್ಥಾಯಿ ಸಮಿತಿ** ಮತ್ತು ತಾಂತ್ರಿಕ ಸಲಹೆ ನೀಡಲು **ತಾಂತ್ರಿಕ ಸಮಿತಿಗಳು** ಕರ್ತವ್ಯ ನಿರ್ವಹಿಸುತ್ತವೆ.

**ಹಣಕಾಸು ಸ್ಥಾಯಿ ಸಮಿತಿ**

ಔಷಧಿ ಬೆಳೆಗಳ ಮಂಡಳಿಯಡಿ, ಆಯುಷ್ ಇಲಾಖೆಯ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ಕರ್ತವ್ಯ ನಿರ್ವಹಿಸುವ ಹಣಕಾಸು ಸ್ಥಾಯಿ ಸಮಿತಿಯು, ಮಿಷನ್‌ನ ಕಾರ್ಯಾನುಷ್ಠಾನ ಸಮಿತಿಯಾಗಿ ಜವಾಬ್ದಾರಿ ನಿಭಾಯಿಸುತ್ತದೆ. ಸಮಿತಿಯು ಈ ಕೆಳಗಿನಂತೆ ಸದಸ್ಯರುಗಳನ್ನು ಹೊಂದಿರುತ್ತದೆ;

1. ಆಯುಷ್ ಇಲಾಖೆಯ ಕಾರ್ಯದರ್ಶಿ : ಅಧ್ಯಕ್ಷರು
2. ಹೆಚ್ಚುವರಿ ಕಾರ್ಯದರ್ಶಿ ಮತ್ತು ಹಣಕಾಸು ಸಲಹೆಗಾರರು, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ : ಸದಸ್ಯರು
3. ಜಂಟಿ ಕಾರ್ಯದರ್ಶಿ ಅಥವಾ ಸಮಾನಾಂತರ ಶ್ರೇಣಿಯ ಅಧಿಕಾರಿ, ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಇಲಾಖೆ : ಸದಸ್ಯರು
4. ಜಂಟಿ ಕಾರ್ಯದರ್ಶಿ ಅಥವಾ ಸಮಾನಾಂತರ ಶ್ರೇಣಿಯ ಅಧಿಕಾರಿ, ಜೈವಿಕ ತಂತ್ರಜ್ಞಾನ ಇಲಾಖೆ : ಸದಸ್ಯರು
5. ಜಂಟಿ ಕಾರ್ಯದರ್ಶಿ ಅಥವಾ ಸಮಾನಾಂತರ ಶ್ರೇಣಿಯ ಅಧಿಕಾರಿ, ಕೃಷಿಸಂಶೋಧನಾ ಮತ್ತು ಶಿಕ್ಷಣ ಇಲಾಖೆ : ಸದಸ್ಯರು
6. ಜಂಟಿ ಕಾರ್ಯದರ್ಶಿ ಅಥವಾ ಸಮಾನಾಂತರ ಶ್ರೇಣಿಯ ಅಧಿಕಾರಿ, ಪರಿಸರ ಮತ್ತು ಅರಣ್ಯ ಸಚಿವಾಲಯ : ಸದಸ್ಯರು
7. ಜಂಟಿ ಕಾರ್ಯದರ್ಶಿಅಥವಾ ಸಮಾನಾಂತರ ಶ್ರೇಣಿಯ ಅಧಿಕಾರಿ, ವಾಣಿಜ್ಯ ಸಚಿವಾಲಯ : ಸದಸ್ಯರು
8. ಜಂಟಿ ಕಾರ್ಯದರ್ಶಿ ಅಥವಾ ಸಮಾನಾಂತರ ಶ್ರೇಣಿಯ ಅಧಿಕಾರಿ, ಈಶಾನ್ಯ ರಾಜ್ಯಗಳ ಅಭಿವೃದ್ಧಿ ಸಚಿವಾಲಯ : ಸದಸ್ಯರು
9. ಕಾರ್ಯದರ್ಶಿ ಅಥವಾ ಅವರ ಪ್ರತಿನಿಧಿ, ಈಶಾನ್ಯ ರಾಜ್ಯಗಳ ಪರಿಷತ್ತು, ಷಿಲ್ಲಾಂಗ್ : ಸದಸ್ಯರು
10. ಜಂಟಿ ಕಾರ್ಯದರ್ಶಿ, ಆಯುಷ್ ಇಲಾಖೆ : ಸದಸ್ಯರು
11. ಆಯುರ್ವೇದಿಕ್ ಕೈಗಾರಿಕಾ ಕ್ಷೇತ್ರದ ಪ್ರತಿನಿಧಿ : ಸದಸ್ಯರು
12. ಔಷಧಿ ಬೆಳೆ/ ಮೂಲಿಕೆ ಪದಾರ್ಥಗಳ ರಫ್ತುದಾರರ ಪ್ರತಿನಿಧಿ : ಸದಸ್ಯರು
13. ಔಷಧಿ ಬೆಳೆಗಾರರ ಸಂಘ ಸಂಸ್ಥೆಗಳ ಪ್ರತಿನಿಧಿ : ಸದಸ್ಯರು
14. ಕಾರ್ಯದರ್ಶಿ, ಆಯುಷ್ ಇಲಾಖೆ ರವರಿಂದ ನಾಮಕರಣ ಮಾಡಲ್ಪಟ್ಟ ಇಬ್ಬರು ಆಯುಷ್ ಕ್ಷೇತ್ರದ ಪರಿಣಿತರು : ಸದಸ್ಯರು
15. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ : ಸದಸ್ಯ ಕಾರ್ಯದರ್ಶಿ

ಹಣಕಾಸು ಸ್ಥಾಯಿ ಸಮಿತಿಯ ಅಧ್ಯಕ್ಷರು ಔಷಧಿ ಬೆಳೆಗಳ ಕ್ಷೇತ್ರದ ಸಂಶೋಧನೆ ಮತ್ತು ಅಭಿವೃದ್ಧಿ, ಗುಣಮಟ್ಟ ನಿಯಂತ್ರಣ, ಯೋಜನೆ ಇಲಾಖೆ ಹಾಗೂ ಮತ್ತಿತರೆ ಸಂಬಂಧಪಟ್ಟ ಇಲಾಖೆಗಳು / ಸಂಸ್ಥೆಗಳ ಪ್ರತಿನಿಧಿಗಳನ್ನು, ವಿಶೇಷ ಆಹ್ವಾನಿತರಾಗಿ ಆಹ್ವಾನಿಸಲು ಸಂಪೂರ್ಣ ಅಧಿಕಾರ ಹೊಂದಿರುತ್ತಾರೆ.

ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ ಹಣಕಾಸು ಸ್ಥಾಯಿ ಸಮಿತಿ ಮತ್ತು ಔಷಧಿ ಬೆಳೆಗಳ ಮಿಷನ್‌ಗೆ ಅವಶ್ಯವಿರುವ ಎಲ್ಲಾ ಸಹಕಾರ ನೀಡುತ್ತದೆ. ಜಂಟಿ ಕಾರ್ಯದರ್ಶಿ ಶ್ರೇಣಿಯವರು ಆದ, ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಿಷನ್‌ನ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಾರೆ. ಇವರಿಗೆ ಇಲಾಖಾ ಮುಖ್ಯಸ್ಥರ ಅಧಿಕಾರ ನೀಡಲಾಗಿದ್ದು, ಮಿಷನ್‌ನ ಕ್ರಿಯಾ ಯೋಜನೆ ತಯಾರಿ, ಅನುಷ್ಠಾನ, ಹಣಕಾಸು ಸ್ಥಾಯಿ ಸಮಿತಿವತಿಯಿಂದ ಅನುಮೋದನೆಯಾದ ಪ್ರಸ್ತಾವನೆಗಳ ಅನುಷ್ಠಾನದ ಸಂಪೂರ್ಣ ಜವಬ್ದಾರಿ ಹೊಂದಿರುತ್ತಾರೆ.

**ಹಣಕಾಸು ಸ್ಥಾಯಿ ಸಮಿತಿಯ ಕರ್ತವ್ಯಗಳು:**

- ಔಷಧಿ ಬೆಳೆಗಳ ಮಂಡಳಿಯ ಚಟುವಟಿಕೆಗಳ ಮೇಲುಸ್ತುವಾರಿ ನಡೆಸುವುದು ಮತ್ತು ವಾರ್ಷಿಕ ಆಯವ್ಯಯ ಅನುಮೋದಿಸುವುದು.
- ಆಯವ್ಯಯದಲ್ಲಿ ಸೇರಿಸಲಾಗುವ ಹಣಕಾಸು ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದಿಸುವುದು.
- ಯಾವುದೇ ರೀತಿಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದಿಸುವುದು.
- ಹೊಸ ಹುದ್ದೆಗಳ ಸೃಷ್ಟಿ ಸಂಬಂಧಿತ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದಿಸುವುದು.
- ಯೋಜನೆಯ ವಿವಿಧ ಘಟಕಗಳಡಿ, ರಾಜ್ಯಗಳಿಗೆ ಅನುದಾನ ಹಂಚಿಕೆ ಮಾಡುವುದು.
- ಹಾಲಿ ಜಾರಿಯಲ್ಲಿರುವ ವಿಧಿ-ವಿಧಾನಗಳನ್ವಯ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದಿಸುವುದು.
- ಯೋಜನೆಯಡಿ ನಿಗಧಿಪಡಿಸಲಾಗಿರುವ ಘಟಕಗಳನ್ನು ಹೊರತುಪಡಿಸಿ, ಸಲ್ಲಿಸಲಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದಿಸುವುದು.
- ಯೋಜನೆಯಡಿ ವಿತರಿಸಲಾಗುವ ಸಹಾಯಧನ ವಿತರಣೆ ಕಾರ್ಯಕ್ರಮದ ಒಟ್ಟಾರೆ ಮೇಲ್ವಿಚಾರಣೆ ನಡೆಸುವುದು, ಅದರಲ್ಲೂ ವಿಶೇಷವಾಗಿ ಸಾಗುವಳಿ ಸಹಾಯಧನದ ಪ್ರಮಾಣ ಶೇ.30 ಮೀರದಂತೆ ನಿಗಾವಹಿಸುವುದು.

**ತಾಂತ್ರಿಕ ಸಮಿತಿ:**

ಯೋಜನೆಯಡಿ ಪ್ರಸ್ತಾವನೆಗಳ ತಾಂತ್ರಿಕ ಪರಿಶೀಲನೆಗಾಗಿ, ತಾಂತ್ರಿಕ ಸಮಿತಿ ರಚಿಸುವ ಅಧಿಕಾರ ಆಯುಷ್ ಇಲಾಖೆಯ ಕಾರ್ಯದರ್ಶಿಯವರಿಗೆ ಇರುತ್ತದೆ. ಸಮಿತಿಯು ಔಷಧಿ ಬೆಳೆಗಳ ಕ್ಷೇತ್ರದ ಪರಿಣಿತರನ್ನು ಸದಸ್ಯರನ್ನಾಗಿ ಹೊಂದಿರುತ್ತದೆ ಹಾಗೂ ಸಮಿತಿಯಲ್ಲಿ ಕೆಳಕಾಣಿಸಿದ ಸಚಿವಾಲಯಗಳ / ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಅವಶ್ಯಕತೆಗನುಗುಣವಾಗಿ ಸದಸ್ಯರನ್ನಾಗಿ ಹೊಂದಬಹುದಾಗಿರುತ್ತದೆ.

1. ರಾಷ್ಟ್ರೀಯ ತೋಟಗಾರಿಕೆ ಮಂಡಳಿಯ ಪ್ರತಿನಿಧಿ.
2. ಭಾರತೀಯ ಕೃಷಿ ಸಂಶೋಧನಾ ಅನುಸಂಧಾನ ಪರಿಷತ್ತು (ICAR).
3. ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಅನುಸಂಧಾನ ಪರಿಷತ್ತು (CSIR).
4. ಆಯುಷ್ ಇಲಾಖೆಯ ಪ್ರತಿನಿಧಿ.
5. ಕಾರ್ಯದರ್ಶಿಗಳು, ಈಶಾನ್ಯ ರಾಜ್ಯಗಳ ಪರಿಷತ್ತು, ಷಿಲ್ಲಾಂಗ್ ರವರ ಪ್ರತಿನಿಧಿ.
6. ಆಯುಷ್ ಇಲಾಖೆಯ ಕಾರ್ಯದರ್ಶಿಯವರು ನಾಮಕರಣ ಮಾಡಿದ ಇಬ್ಬರು ಸದಸ್ಯರು.
7. ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯ ಪ್ರತಿನಿಧಿ- ಸದಸ್ಯ ಕಾರ್ಯದರ್ಶಿ.

## 4B. ರಾಜ್ಯಮಟ್ಟದ ಶ್ರೇಣಿ

**ರಾಜ್ಯಮಟ್ಟದ ಅನುಷ್ಠಾನ ನಿರ್ಣಯಿಸುವ ಸಮಿತಿ:** ಸಮಿತಿಯ ರಚನೆ ಈ ಕೆಳಗಿನಂತಿರುತ್ತದೆ;

| | | |
|---|---|---|
| 1. | ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ ಅಭಿವೃದ್ಧಿ ಆಯುಕ್ತರು/ ಕೃಷಿ ಉತ್ಪಾದನಾ ಆಯುಕ್ತರು | : ಅಧ್ಯಕ್ಷರು |
| 2. | ರಾಜ್ಯ ಔಷಧಿ ಬೆಳೆಗಳ ಮಂಡಳಿಯ ಸದಸ್ಯ ಕಾರ್ಯದರ್ಶಿ | : ಸದಸ್ಯರು |
| 3. | ರಾಜ್ಯ ಸರ್ಕಾರದ ಆರೋಗ್ಯ / ಆಯುಷ್ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ | : ಸದಸ್ಯರು |
| 4. | ರಾಜ್ಯ ಸರ್ಕಾರದ ಕೃಷಿ / ತೋಟಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿ | : ಸದಸ್ಯರು |
| 5. | ರಾಜ್ಯ ಸರ್ಕಾರದ ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ | : ಸದಸ್ಯರು |
| 6. | ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯ ಪ್ರತಿನಿಧಿ | : ಸದಸ್ಯರು |
| 7. | ಕೇಂದ್ರ ಸರ್ಕಾರದ ಸಂಸ್ಥೆಗಳ ಪ್ರತಿನಿಧಿ(ಗಳು) | : ಸದಸ್ಯರು |
| 8. | ರಾಜ್ಯ ಸರ್ಕಾರದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು | : ಸದಸ್ಯರು |
| 9. | ಇಬ್ಬರು ಔಷಧಿ ಬೆಳೆ ಕ್ಷೇತ್ರದ ಪರಿಣಿತರು | : ಸದಸ್ಯರು |
| 10. | ಮಿಷನ್ ನಿರ್ದೇಶಕರು, ರಾಜ್ಯ ತೋಟಗಾರಿಕೆ ಮಿಷನ್ | : ಸದಸ್ಯರು |

## 5. ರಾಜ್ಯಗಳಲ್ಲಿ ಔಷಧಿ ಬೆಳೆಗಳ ಮಿಷನ್ ಅನುಷ್ಠಾನಕ್ಕೆ ಏಜೆನ್ಸಿಗಳ ಆಯ್ಕೆ:

ರಾಜ್ಯ ಸರ್ಕಾರಗಳು ರಾಜ್ಯ ತೋಟಗಾರಿಕಾ ಮಿಷನ್ ನಿರ್ದೇಶಕರನ್ನು, ರಾಜ್ಯ ಔಷಧಿ ಬೆಳೆಗಳ ಮಿಷನ್‌ನ ರಾಜ್ಯಮಟ್ಟದ ಅನುಷ್ಠಾನ ನಿರ್ಣಯ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಮತ್ತು ಅನುಷ್ಠಾನ ಏಜೆನ್ಸಿಯನ್ನಾಗಿ ಆಯ್ಕೆಮಾಡಬಹುದು. ಇಂಥಹ ಸಂದರ್ಭಗಳಲ್ಲಿ ಔಷಧಿ ಬೆಳೆಗಳ ಮಂಡಳಿ ವತಿಯಿಂದ, ಅನುದಾನವನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮೂಲಕ ಬಿಡುಗಡೆಗೊಳಿಸಿ, ಪ್ರತ್ಯೇಕ ಲೆಕ್ಕ ವ್ಯವಹಾರಗಳನ್ನು ನಿರ್ವಹಿಸುವುದು. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅನುಷ್ಠಾನವಿಲ್ಲದ ರಾಜ್ಯಗಳಲ್ಲಿ, ರಾಜ್ಯ ಸರ್ಕಾರಗಳು ರಾಜ್ಯ ಕೃಷಿ ಇಲಾಖೆಗಳನ್ನು ಮಿಷನ್ ಅನುಷ್ಠಾನಕ್ಕಾಗಿ ನೋಡಲ್ ಇಲಾಖೆಯಾಗಿ ನೇಮಿಸಬಹುದು. ಇಂಥಹ ಸಂದರ್ಭಗಳಲ್ಲಿ ಅನುದಾನವನ್ನು ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ ವತಿಯಿಂದ ರಾಜ್ಯ ಔಷಧಿ ಬೆಳೆಗಳ ಮಂಡಳಿಗಳ ಮೂಲಕ ಅಥವಾ ರಾಜ್ಯದ ಆರೋಗ್ಯ ಸೊಸೈಟಿಗಳ ಮೂಲಕ, ಅನುಷ್ಠಾನ ಏಜೆನ್ಸಿಗೆ ಬಿಡುಗಡೆ ಮಾಡಬಹುದು. ರಾಜ್ಯ ಸರ್ಕಾರಗಳು ಮಿಷನ್‌ನ ಪರಿಣಾಮಕಾರಿ ಅನುಷ್ಠಾನವನ್ನು ದೃಷ್ಠಿಯಲ್ಲಿಟ್ಟುಕೊಂಡು, ಸೂಕ್ತ ಏಜೆನ್ಸಿಗಳನ್ನು ಆಯ್ಕೆ ಮಾಡುವುದು.

ರಾಜ್ಯ ತೋಟಗಾರಿಕಾ ಮಿಷನ್ ವತಿಯಿಂದ ಔಷಧಿ ಬೆಳೆಗಳ ಮಿಷನ್ ಅನುಷ್ಠಾನವಾಗುವುದಾದಲ್ಲಿ, ಇದು ಸೊಸೈಟಿಯಾಗಿ ನೋಂದಣಿಯಾಗಬೇಕು ಹಾಗೂ ಯೋಜನೆಯನ್ನು ಕೃಷಿ, ಆಯುಷ್, ಕೈಗಾರಿಕೆ ಇಲಾಖೆಗಳು ಮತ್ತು ರಾಜ್ಯ ಔಷಧಿ ಬೆಳೆಗಳ ಮಂಡಳಿಯ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವುದು. ಈ ಏಜೆನ್ಸಿಗೆ ಅನುದಾನವನ್ನು ಪಡೆದು ಅನುಷ್ಠಾನಗೊಳಿಸುವ ಕಾರ್ಯಾನುಷ್ಠಾನ ಸ್ವತಂತ್ರವಿರುತ್ತದೆ. ಜಿಲ್ಲಾ ಮಟ್ಟದಲ್ಲಿ ಅನುಷ್ಠಾನ ಏಜೆನ್ಸಿಯ ಆಯ್ಕೆ, ಗೊಂಚಲುಗಳ ಆಯ್ಕೆ, ಬೆಳೆಗಾರರ ಸ್ವಸಹಾಯ ಗುಂಪುಗಳು/ ಸಹಕಾರಿ ಸಂಘಗಳು/ ಉತ್ಪಾದಕರ ಕಂಪನಿಗಳ ರಚನೆ ಇತ್ಯಾದಿ ಪ್ರಕ್ರಿಯೆಗಳಲ್ಲಿ ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳನ್ನು ಪೂರ್ಣವಾಗಿ ತೊಡಗಿಸಿಕೊಳ್ಳುವುದು.

ಮಿಷನ್‌ಅಡಿ ಎಲ್ಲಾ ಘಟಕಗಳು ಸೂಕ್ತ ತಾಂತ್ರಿಕ ರೀತಿಯಲ್ಲಿ ಅನುಷ್ಠಾನಗೊಳ್ಳಲು ಅನುವಾಗುವಂತೆ ರಚಿಸಲಾಗಿರುವ, ಪರಿಣಿತರನ್ನೊಳಗೊಂಡ ಕೇಂದ್ರೀಯ ತಾಂತ್ರಿಕ ಸಮಿತಿ, ರಾಜ್ಯ ಸರ್ಕಾರಗಳಿಗೆ ಸಲಹೆ ಸೂಚನೆಗಳನ್ನು ನೀಡುವುದರ ಜೊತೆಗೆ ಯೋಜನೆಯ ಕ್ರಿಯಾ ಯೋಜನೆ/ ಪ್ರಸ್ತಾವನೆಗಳ ಪರಿಶೀಲನೆ, ಬದಲಾವಣೆ, ಅನುಮೋದನೆ ನೀಡುವ ಕಾರ್ಯವನ್ನು ಸಹ ನಿಭಾಯಿಸುವುದು. ರಾಜ್ಯ ಮಟ್ಟದಲ್ಲಿ ಸಹಾ

ಪರಿಣಿತರನ್ನೊಳಗೊಂಡ ತಾಂತ್ರಿಕ ಸಮಿತಿ ವಿವಿಧ ಪ್ರಸ್ತಾವನೆಗಳ ವಿವರವಾದ ಪರಿಶೀಲನೆ ನಡೆಸುತ್ತದೆ. ರಾಜ್ಯ ಸರ್ಕಾರಗಳು ತಮ್ಮ ವ್ಯಾಪ್ತಿಯಲ್ಲಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ, ಲಭ್ಯವಿರುವ ಸಮರ್ಥ/ಸೂಕ್ತ (ಔಷಧಿ ಬೆಳೆಗಾರರ ಸಹಕಾರಿ ಸಂಘಗಳು, ಸಂಘ ಸಂಸ್ಥೆಗಳು, ಅರಣ್ಯ ಅಭಿವೃದ್ಧಿ ನಿಗಮಗಳ ಮೂಲಕ ಹಾಗೂ ಕೋಯ್ಲೋತ್ತರ ಚಟುವಟಿಕೆಗಳು/ ಸಂಸ್ಕರಣೆ/ ಮೌಲ್ಯವರ್ಧನೆ/ ಮಾರುಕಟ್ಟೆ ಘಟಕಗಳ ಅನುಷ್ಠಾನಕ್ಕೆ ಜಂಟಿ ವಲಯ ಕೈಗಾರಿಕಾ ಕಂಪನಿಗಳ ಮೂಲಕ) ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಹೊಂದಿರುತ್ತವೆ. ಸಾದ್ಯವಾದ ಕಡೆಗಳಲ್ಲಿ, ಗೊಂಚಲುಗಳ ಗುರುತಿಸುವಿಕೆ, ಮೂಲ ಭೂತ ಸೌಕರ್ಯಗಳ ಅಭಿವೃದ್ಧಿ ಚಟುವಟಿಕೆಗಳನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಚಟುವಟಿಕೆಗಳೊಂದಿಗೆ ಸಮನ್ವಯಗೊಳಿಸುವುದು.

**5A. ರಾಜ್ಯ ಔಷಧಿ ಬೆಳೆಗಳ ಮಿಷನ್ ಅನುಷ್ಠಾನ ಏಜೆನ್ಸಿಯ ಕರ್ತವ್ಯಗಳು:**

1. ರಾಜ್ಯ ತಾಂತ್ರಿಕ ಸಮಿತಿಯ ಸಲಹೆಯೊಂದಿಗೆ ಕ್ರಿಯಾ ಯೋಜನೆ ತಯಾರಿಸುವುದು.
2. ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ ಮತ್ತು ರಾಜ್ಯ ಸರ್ಕಾರಗಳಿಂದ ಅನುದಾನ ಪಡೆದುಕೊಳ್ಳುವುದು, ಮಾರ್ಗಸೂಚಿ ಅನುಸಾರ ಯೋಜನೆಯ ಘಟಕಗಳನ್ನು ಅನುಷ್ಠಾನಗೊಳಿಸುವುದು, ಅನುದಾನದ ಸೂಕ್ತ ಲೆಕ್ಕ ವ್ಯವಹಾರ ನಿರ್ವಹಣೆ ಮತ್ತು ಹಣ ಬಳಕೆ ದೃಢೀಕರಣ ಪತ್ರ ನೀಡುವುದು.
3. ಯೋಜನೆಯ ವಿವಿಧ ಘಟಕಗಳನ್ನು ಅನುಷ್ಠಾನಗೊಳಿಸುವ ಬೆಳೆಗಾರರ ಸಹಕಾರಿ ಸಂಘಗಳು, ಸಂಘ ಸಂಸ್ಥೆಗಳು, ಉತ್ಪಾದಕರ ಕಂಪನಿಗಳು, ಸ್ವಸಹಾಯ ಗುಂಪುಗಳಿಗೆ ಅನುದಾನ ಬಿಡುಗಡೆಗೊಳಿಸುವುದು, ಹಾಗೂ ಸದರಿ ಏಜೆನ್ಸಿಗಳ ಮೂಲಕ ಯೋಜನೆ ಅನುಷ್ಠಾನಗೊಳ್ಳುವುದನ್ನು ಮೇಲುಸ್ತುವಾರಿ ಮಾಡುವುದು.
4. ಗೊಂಚಲು/ತಾಲ್ಲೂಕು/ಜಿಲ್ಲೆ/ವಿಭಾಗೀಯ ಮಟ್ಟದಲ್ಲಿ ಔಷಧಿ ಬೆಳೆಗಳ ಕುರಿತ ಮೂಲಭೂತ ಮಾಹಿತಿ ಸಂಗ್ರಹಿಸುವುದು, ವಿವಿಧ ಭಾಗಗಳಲ್ಲಿ ಯೋಜನೆ ಅನುಷ್ಠಾನದ ಸಾಧ್ಯಾಸಾಧ್ಯತೆ/ ಸೂಕ್ತತೆ ಅಭ್ಯಸಿಸುವುದು, ಔಷಧಿ ಕ್ಷೇತ್ರದ ಅಭಿವೃದ್ಧಿಗೆ ಇರುವ ಅವಕಾಶಗಳು ಮತ್ತು ಬೇಡಿಕೆಗಳ ವಿಮರ್ಶೆ ಮಾಡುವುದು ಹಾಗೂ ತಕ್ಕಂತೆ ಕಾರ್ಯ ಯೋಜನೆ ರೂಪಿಸುವುದು.
5. ರಾಜ್ಯ ಸರ್ಕಾರದ ವಿವಿಧ ಅಂಗ ಸಂಸ್ಥೆಗಳು/ಬೆಳೆಗಾರರ ಸಹಕಾರಿ ಸಂಘಗಳು/ಸಂಘ ಸಂಸ್ಥೆಗಳು, ಉತ್ಪಾದಕರ ಕಂಪನಿಗಳು/ಸ್ವಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳ ಮೂಲಕ ಯೋಜನೆಯ ವಿವಿಧ ಘಟಕಗಳನ್ನು ಅನುಷ್ಠಾನಗೊಳಿಸುವುದು.
6. ಔಷಧಿ ಬೆಳೆಗಾರರನ್ನು ಒಗ್ಗೂಡಿಸಿ, ಸಹಕಾರಿ ಸಂಘಗಳು/ಉತ್ಪಾದಕರ ಕಂಪನಿಗಳು/ಸಂಘ ಸಂಸ್ಥೆಗಳು/ಸ್ವಸಹಾಯ ಗುಂಪುಗಳಾಗಿ ರೂಪಿಸಲು ಉತ್ತೇಜನ ನೀಡುವುದು. ಯೋಜನೆಯ ಅಡಿ ಲಭ್ಯವಿರುವ ಅನುದಾನವನ್ನು ಈ ಕುರಿತ ತರಬೇತಿ/ಮಾಹಿತಿ ಶಿಬಿರ ಹಮ್ಮಿಕೊಳ್ಳಲು ಬಳಸಿಕೊಳ್ಳಬಹುದು.
7. ಬೆಳೆಗಾರರು ಹಾಗೂ ಸಹಕಾರಿ ಸಂಘಗಳು/ಉತ್ಪಾದಕರ ಕಂಪನಿಗಳು/ಸಂಘ ಸಂಸ್ಥೆಗಳು/ಸ್ವಸಹಾಯ ಗುಂಪುಗಳಿಗೆ ಯೋಜನೆ ಕುರಿತು ಕಾರ್ಯಗಾರ, ವಿಚಾರ ಸಂಕಿರಣ, ತರಬೇತಿ ಕಾರ್ಯಕ್ರಮ ಇತ್ಯಾದಿಗಳನ್ನು ICAR / CSIR ಸಂಸ್ಥೆಗಳು / ಕೃಷಿ ವಿಶ್ವವಿದ್ಯಾನಿಲಯಗಳ ಪರಿಣಿತರ ಸಹಯೋಗದೊಂದಿಗೆ ಯೋಜಿಸಿ ಅನುಷ್ಠಾನಗೊಳಿಸುವುದು.

**5.B. ಸಲಹಾ ಕೇಂದ್ರಗಳು:** ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯು ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕೇಂದ್ರ ಸರ್ಕಾರದ ವಿಜ್ಞಾನ ಸಚಿವಾಲಯದ ಜೈವಿಕ ತಂತ್ರಜ್ಞಾನ ಇಲಾಖೆ (DBT) ಹಾಗೂ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಅನುಸಂಧನಾ ಪರಿಷತ್ತು (CSIR) ಅಧೀನದ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಲ್ಲಿ ಸಲಹಾ ಕೇಂದ್ರಗಳನ್ನು ಸ್ಥಾಪಿಸಿರುತ್ತದೆ. ಈ ಕೇಂದ್ರಗಳು ಬೆಳೆಗಾರರು ಮತ್ತು ಉದ್ದಿಮೆದಾರರಿಗೆ ತಂತ್ರಜ್ಞಾನ ವರ್ಗವಣೆ ಸಾಮರ್ಥ್ಯ ರೂಪಿಸುವುದು ತರಬೇತಿ – ವಿಸ್ತರಣೆ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು ಮಾರುಕಟ್ಟೆ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಒದಗಿಸುವ ಕರ್ತವ್ಯ ನಿಭಾಯಿಸುತ್ತವೆ. ಯೋಜನೆಯ ಅನುಷ್ಠಾನ ಏಜೆನ್ಸಿಗಳು ಈ ಕೇಂದ್ರಗಳ ಸಹಯೋಗದೊಂದಿಗೆ ಕರ್ತವ್ಯ ನಿರ್ವಹಿಸುವುದು ಅವಶ್ಯಕತೆ ಅನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅಂತಹ ಕೇಂದ್ರಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಲಾಗುವುದು.

# ಅಧ್ಯಾಯ–3

# ನರ್ಸರಿ ಅಭಿವೃದ್ಧಿಗೆ ಸಹಾಯಧನ

## ಗುಣಮಟ್ಟದ ಬೀಜೋತ್ಪಾದನೆ ಕೇಂದ್ರಗಳು ಮತ್ತು ನರ್ಸರಿಗಳ ಅಭಿವೃದ್ಧಿ

ಅನ್ಯ ಎಲ್ಲಾ ಕೃಷಿ ಬೆಳೆಗಳಂತೆ, ಔಷಧಿ ಬೆಳೆಗಳ ಯಶಸ್ವಿ ಬೇಸಾಯವು ಸಹ ಸಸ್ಯ ಸಾಮಗ್ರಿಗಳ ಗುಣಮಟ್ಟವನ್ನು ಅವಲಂಭಿಸಿರುತ್ತದೆ. ಸಧ್ಯದ ಪರಿಸ್ಥಿತಿಯಲ್ಲಿ, ದೃಢೀಕೃತ ಬೀಜ ಮೂಲ/ ಸಸ್ಯ ಸಾಮಗ್ರಿಯನ್ನು ಒದಗಿಸಲು ಮತ್ತು ಸಸ್ಯಾಭಿವೃದ್ಧಿ ಕೈಗೊಳ್ಳಲು ಯಾವುದೇ ರೀತಿಯ ಮಾರ್ಗಗಳಿರುವುದಿಲ್ಲ. ದೃಢೀಕೃತ ಗುಣಮಟ್ಟದ ಸಸ್ಯ ಸಾಮಗ್ರಿ ಕೊರತೆಯನ್ನು ನೀಗಿಸಲು ಸಂಶೋಧನಾ ಸಂಸ್ಥೆಗಳು/ ಕೃಷಿ ವಿಶ್ವವಿದ್ಯಾನಿಲಯಗಳು/ ರಾಜ್ಯ ತೋಟಗಾರಿಕೆ ಮತ್ತು ಅರಣ್ಯ ಇಲಾಖೆಗಳ ವತಿಯಿಂದ, ಔಷಧಿ ಬೆಳೆಗಳ ಗುಣಮಟ್ಟದ ಬೀಜ ಮೂಲ/ ಸಸ್ಯ ಸಾಮಗ್ರಿ ಸಂಗ್ರಹಣೆ ಮತ್ತು ಉತ್ಪಾದನಾ ಘಟಕಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿರುತ್ತದೆ. ಉತ್ತಮ ಗುಣಮಟ್ಟದ ಬೀಜ / ಸಸ್ಯ ಸಾಮಗ್ರಿಗಳನ್ನು ಸರ್ಕಾರೇತರ/ ಇತರೆ ಸಂಘ ಸಂಸ್ಥೆಗಳು ಉತ್ಪಾದಿಸಿ, ಗುಣಮಟ್ಟವನ್ನು ಪ್ರಮಾಣೀಕರಣ ಏಜೆನ್ಸಿ ಯೊಂದರಿಂದ ದೃಢೀಕರಣಗೊಳಿಸಿದಲ್ಲಿ, ಸದರಿ ಸಂಘ ಸಂಸ್ಥೆಗಳ ಮೂಲಕವು ಸಹ ಬೀಜ / ಸಸ್ಯ ಸಾಮಗ್ರಿ ಉತ್ಪಾದನೆ ಮತ್ತು ವಿತರಣೆ ಕಾರ್ಯಕ್ಕೆ ಅವಕಾಶ ಕಲ್ಪಿಸಲಾಗಿರುತ್ತದೆ.

### 1. ಮಾದರಿ ನರ್ಸರಿಗಳಿಗೆ ಸಹಾಯಧನ

ಉತ್ತಮ ಗುಣಮಟ್ಟದ ಬೀಜ / ಸಸ್ಯ ಸಾಮಗ್ರಿ ಬೇಡಿಕೆ ಪೂರೈಸಲು ಅನುವಾಗುವಂತೆ, ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿ ಹೊಸ ನರ್ಸರಿಗಳ ಸ್ಥಾಪನೆ ಮತ್ತು ಅಭಿವೃದ್ಧಿಗೆ ಸಹಾಯಧನ ಒದಗಿಸಲಾಗುವುದು.

ಮಾದರಿ ನರ್ಸರಿಯನ್ನು ಕನಿಷ್ಠ 4 ಹೆಕ್ಟೇರ್ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸುವುದು ಮತ್ತು ಇದಕ್ಕೆ ತಗಲುವ ಘಟಕ ವೆಚ್ಚ ರೂ.20.00 ಲಕ್ಷಗಳಾಗಿರುತ್ತದೆ. ಪ್ರತಿ ಮಾದರಿ ನರ್ಸರಿಯಲ್ಲಿ ಪರಿಕರಗಳ ಖರ್ಚು ಮತ್ತು ಗಿಡಗಳ ಉತ್ಪಾದನೆಗೆ ಬೇಕಾಗುವ ಸಮಯಗಳನ್ನಾಧರಿಸಿ ಕನಿಷ್ಠ 2 ರಿಂದ 3 ಲಕ್ಷ ಗಿಡಗಳನ್ನು ಉತ್ಪಾದಿಸಬೇಕಾಗುತ್ತದೆ. ಉತ್ತಮ ಗುಣಮಟ್ಟದ ಗಿಡಗಳ ಉತ್ಪಾದನೆ ಕಡ್ಡಾಯವಾಗಿರುತ್ತದೆ. ಸಾರ್ವಜನಿಕ ವಲಯದ ನರ್ಸರಿಗಳಿಗೆ ಘಟಕ ವೆಚ್ಚದ ಶೇ.100 ರಷ್ಟು (ಗರಿಷ್ಠ ರೂ.20.00 ಲಕ್ಷ) ಮತ್ತು ಖಾಸಗಿ ವಲಯದ ನರ್ಸರಿಗಳಿಗೆ ಘಟಕ ವೆಚ್ಚದ ಶೇ.50 ರಷ್ಟು (ಗರಿಷ್ಠ ರೂ.10.00 ಲಕ್ಷ) ಸಹಾಯಧನಕ್ಕೆ ಅವಕಾಶವಿರುತ್ತದೆ. ಸಾರ್ವಜನಿಕ ವಲಯದ ಮಾದರಿ ನರ್ಸರಿಗಳಿಗೆ ಸಂಪೂರ್ಣ ಸಹಾಯಧನವನ್ನು ಮುಂಗಡವಾಗಿ ನೀಡಲಾಗುವುದು. ಖಾಸಗಿ ವಲಯದ ನರ್ಸರಿಗಳಿಗೆ ನರ್ಸರಿ ಸ್ಥಾಪನೆ ಪೂರ್ಣಗೊಂಡ ನಂತರ ಸಾಲ ತೆಗೆದುಕೊಂಡ ಬ್ಯಾಂಕ್ ಖಾತೆಗೆ ಹೊಂದಿಸಲಾಗುವುದು (back ended credit linked subsidy).

### 2. ಸಣ್ಣ ನರ್ಸರಿಗಳಿಗೆ ಸಹಾಯಧನ:

ಸಣ್ಣ ನರ್ಸರಿಯನ್ನು ಕನಿಷ್ಠ 1 ಹೆಕ್ಟೇರ್ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸುವುದು ಮತ್ತು ಇದಕ್ಕೆ ತಗಲುವ ಘಟಕ ವೆಚ್ಚ ರೂ.4.00 ಲಕ್ಷಗಳಾಗಿರುತ್ತದೆ. ಪ್ರತಿ ಸಣ್ಣ ನರ್ಸರಿಯಲ್ಲಿ ಪರಿಕರಗಳ ಖರ್ಚು ಮತ್ತು ಗಿಡಗಳ ಉತ್ಪಾದನೆಗೆ ಬೇಕಾಗುವ ಸಮಯಗಳನ್ನಾಧರಿಸಿ ಕನಿಷ್ಠ 60 ರಿಂದ 70 ಸಾವಿರ ಗಿಡಗಳನ್ನು ಉತ್ಪಾದಿಸಬೇಕಾಗುತ್ತದೆ. ಈ ಗಿಡಗಳನ್ನು ಕನಿಷ್ಠ ಒಂದು ವರ್ಷದವರೆಗೆ ಪಾಲನೆ ಮಾಡಲು ಅವಕಾಶವಿರಬೇಕು. ಉತ್ತಮ ಗುಣಮಟ್ಟದ ಗಿಡಗಳ ಉತ್ಪಾದನೆ ಕಡ್ಡಾಯವಾಗಿರುತ್ತದೆ. ಸಾರ್ವಜನಿಕ ವಲಯದ ನರ್ಸರಿಗಳಿಗೆ ಘಟಕ ವೆಚ್ಚದ ಶೇ.100 ರಷ್ಟು (ಗರಿಷ್ಠ ರೂ.4.00 ಲಕ್ಷ) ಮತ್ತು ಖಾಸಗಿ ವಲಯದ ನರ್ಸರಿಗಳಿಗೆ ಘಟಕ ವೆಚ್ಚದ ಶೇ.50 ರಷ್ಟು (ಗರಿಷ್ಠ ರೂ.2.00 ಲಕ್ಷ) ಸಹಾಯಧನಕ್ಕೆ

ಅವಕಾಶವಿರುತ್ತದೆ. ಸಾರ್ವಜನಿಕ ವಲಯದ ಸಣ್ಣ ನರ್ಸರಿಗಳಿಗೆ ಸಂಪೂರ್ಣ ಸಹಾಯಧನವನ್ನು ಮುಂಗಡವಾಗಿ ನೀಡಲಾಗುವುದು. ಖಾಸಗಿ ವಲಯದ ನರ್ಸರಿಗಳಿಗೆ ನರ್ಸರಿ ಸ್ಥಾಪನೆ ಪೂರ್ಣಗೊಂಡ ನಂತರ ಸಾಲ ತೆಗೆದುಕೊಂಡ ಬ್ಯಾಂಕ್ ಖಾತೆಗೆ ಹೊಂದಿಸಲಾಗುವುದು (back ended credit linked subsidy)

ಮಾದರಿ ಮತ್ತು ಸಣ್ಣ ನರ್ಸರಿಯಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

| ಕ್ರ.ಸಂ. | ಘಟಕದ ವಿವರಗಳು | ಮಾದರಿ ನರ್ಸರಿ ಸ್ಥಾಪನೆಗೆ ತಗಲುವ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) | ಸಣ್ಣ ನರ್ಸರಿ ಸ್ಥಾಪನೆಗೆ ತಗಲುವ ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|---|
| i. | **ತಾಯಿ ಗಿಡಗಳ ಅಭಿವೃದ್ಧಿ ಮತ್ತು ಪಾಲನಾ ಘಟಕ:** ಇದರಲ್ಲಿ ಬೇಡಿಕೆಯಲ್ಲಿರುವ ಮತ್ತು ವಿನಾಶದ ಅಂಚಿನಲ್ಲಿರುವ ಪ್ರಮುಖ ಔಷಧಿ ಗಿಡಗಳ ತಾಯಿ ಗಿಡಗಳನ್ನು ಹೊಂದಿರತಕ್ಕದ್ದು. (ಮಾದರಿ ನರ್ಸರಿಗೆ 1 ಹೆಕ್ಟೇರ್ ನಷ್ಟು ಹಾಗೂ ಸಣ್ಣ ನರ್ಸರಿಗೆ ಕನಿಷ್ಠ ಅರ್ಧ ಎಕರೆ) | 1.25 | 0.50 |
| ii. | ಸಸ್ಯಾಭಿವೃದ್ಧಿಗೆ ಅಗತ್ಯವಾದ ನಾಟಿ ಸಸಿಗಳನ್ನು **ನೆರಳು ಪರದೆ ಪೆಂಡಾಲಿನಡಿ** ಅಭಿವೃದ್ಧಿಪಡಿಸುವುದು. | 1.25 | 0.25 |
| iii. | ತುಂತುರು ನೀರಾವರಿ / Fogging/ Mist ವ್ಯವಸ್ಥೆ, ಕೀಟ ನಿರೋಧಕ ಬಲೆ, ಸೂಕ್ತ ಗಾಳಿ ಬೆಳಕಿನ ವ್ಯವಸ್ಥೆಗಳನ್ನು ಹೊಂದಿದ ಸಸ್ಯಾಭಿವೃದ್ಧಿ ಘಟಕ. (ಮಾದರಿ ನರ್ಸರಿಗೆ ಕನಿಷ್ಠ 500 ಚ.ಮೀ. ಹಾಗೂ ಸಣ್ಣ ನರ್ಸರಿಗೆ ಕನಿಷ್ಠ 100 ಚ.ಮೀ.) | 5.50 | 1.25 |
| iv. | ತುಂತುರು ನೀರಾವರಿ, ಬೆಳಕು ನಿಯಂತ್ರಣ ಪರದೆ ವ್ಯವಸ್ಥೆ, ಕೀಟ ನಿರೋಧಕ ಬಲೆ ವ್ಯವಸ್ಥೆಯನ್ನು ಹೊಂದಿದ **ಗಡಸುಗೊಳಿಸುವ ಘಟಕ.** (ಮಾದರಿ ನರ್ಸರಿಗೆ ಕನಿಷ್ಠ 1000 ಚ.ಮೀ. ಹಾಗೂ ಸಣ್ಣ ನರ್ಸರಿಗೆ ಕನಿಷ್ಠ 200 ಚ.ಮೀ.) | 3.50 | 0.50 |
| v. | ಸಮೃದ್ಧ ನೀರಾವರಿ ಮೂಲಗಳ ಅಭಿವೃದ್ಧಿ (ತೆರೆದ ಬಾವಿ, ಕೊಳವೆ ಬಾವಿ ಇತ್ಯಾದಿ), **ಮಳೆ ನೀರು ಕೊಯ್ಲು ಘಟಕ,** ನೀರು ಸಂಗ್ರಹಣಾ ಘಟಕ ಮತ್ತು ನೀರಾವರಿ ಸೌಕರ್ಯ ಒದಗಿಸಲು **ಪಂಪ್ ಹೌಸ್ ವ್ಯವಸ್ಥೆ, ಪೈಪ್ ಲೈನ್, ಹನಿ ನೀರಾವರಿ** ಇತ್ಯಾದಿ | 5.00 | 1.25 |
| vi. | ಸಾವಯವ ಘಟಕಗಳು (**ಕಾಂಪೋಸ್ಟ್, ಎರೆಹುಳು ಗೊಬ್ಬರ ಮತ್ತು ಜೀವಸಾರ ಉತ್ಪಾದನಾ ಘಟಕಗಳು**) | 1.50 | 0.25 |
| vii. | ಬೇಲಿ, ಫಾರ್ಮ್‌ಹೌಸ್, ಮಾರಾಟ ಮಳಿಗೆ ಇತ್ಯಾದಿ ಕನಿಷ್ಠ ಪ್ರಮಾಣದ ಅವಶ್ಯಕತೆಗಳು | 1.00 | 0.00 |
| viii | ಅವಶ್ಯವಿರುವ ಸಾಧನ, ಸಲಕರಣೆ, ಸಣ್ಣ ಯಂತ್ರೋಪಕರಣಗಳು | 0.50 | 0.00 |
| ix | ನರ್ಸರಿ ನಿರ್ವಹಣಾ ಮತ್ತು ಪಾಲನಾ ವೆಚ್ಚ | 0.50 | 0.00 |
| | **ಒಟ್ಟು** | **20.00** | **4.00** |

ಮೇಲ್ಕಾಣಿಸಿದ ವೆಚ್ಚಗಳು ಕೇವಲ ಸೂಚಿತವಾಗಿದ್ದು, ಸ್ಥಳೀಯ/ ನರ್ಸರಿಯ ಅವಶ್ಯಕತೆಗನು ಗುಣವಾಗಿ ಸ್ವಲ್ಪ (ಘಟಕ ವೆಚ್ಚದ ಶೇ.10 ರಿಂದ 20 ರಷ್ಟು) ಮಾರ್ಪಾಡು ಮಾಡಿಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಗಿದೆ. ಖಾಸಗಿ ನರ್ಸರಿ ಅಭಿವೃದ್ಧಿದಾರರು ಮೇಲ್ಕಾಣಿಸಿದ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಡ್ಡಾಯವಾಗಿ ಅಭಿವೃದ್ಧಿಪಡಿಸತಕ್ಕದ್ದು.

ಖಾಸಗಿ ವಲಯದ ಮಾದರಿ ನರ್ಸರಿ ಅಭಿವೃದ್ಧಿಗಾಗಿ ಬ್ಯಾಂಕ್ / ಇತರೆ ಹಣಕಾಸು ಸಂಸ್ಥೆಗಳಿಂದ ಯೋಜನಾ ವೆಚ್ಚದ ಕನಿಷ್ಠ ಶೇ.20 ರಷ್ಟು (ಅಂದರೆ ಕನಿಷ್ಠ ರೂ.4.00 ಲಕ್ಷಗಳ) ಸಾಲವನ್ನು ಪಡೆದಿರಬೇಕು

ಮತ್ತು ಸಣ್ಣ ನರ್ಸರಿ ಅಭಿವೃದ್ಧಿಗೆ ಕನಿಷ್ಠ ರೂ.0.80 ಲಕ್ಷ ಸಾಲ ಪಡೆದಿರಬೇಕು. ಮಾದರಿ ನರ್ಸರಿ ಸ್ಥಾಪನೆಯ ಒಟ್ಟು ವೆಚ್ಚ ರೂ.20.00 ಲಕ್ಷ ಮತ್ತು ಸಣ್ಣ ನರ್ಸರಿ ಸ್ಥಾಪನೆಯ ವೆಚ್ಚ ರೂ.4.00 ಲಕ್ಷಗಳಿಗಿಂತ ಕಡಿಮೆಯಾದಲ್ಲಿ, ಒಟ್ಟು ವೆಚ್ಚದ ಕನಿಷ್ಠ ಶೇ.20 ರಷ್ಟು ಬ್ಯಾಂಕ್ ಸಾಲವನ್ನು ಪಡೆದಿರಬೇಕು. ಇವುಗಳಿಗೆ ಸಂಬಂಧಿಸಿದ ಸಾಲ ಮಂಜೂರಾತಿ ಪತ್ರ ಮತ್ತು Bank Appraisal Report ನ್ನು ಮಂಜೂರಾತಿಗೆ ಮುನ್ನ ಒದಗಿಸಬೇಕು. ಆದರೆ, ಈ ಷರತ್ತು ಸಾರ್ವಜನಿಕ / ಸಂಘ ಸಂಸ್ಥೆಗಳು/ ನೋಂದಾಯಿತ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಬದಲಾಗಿ ಅವರು ಈ ವೆಚ್ಚವನ್ನು ತಾವೇ ಭರಿಸುವ ಬಗ್ಗೆ ಆರ್ಥಿಕ ದೃಢೀಕರಣ ಪತ್ರ ನೀಡಬೇಕು.

ನೀಡಲಾಗುವ ಸಹಾಯಧನವು ಮೊದಲನೇ ವರ್ಷದ ಸಂಪೂರ್ಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ / ಸಸ್ಯೋತ್ಪಾದನೆಗೆ ಮೀಸಲಾಗಿದ್ದು, ಎರಡನೇ ವರ್ಷ ಮತ್ತು ನಂತರದ ನಿರ್ವಹಣಾ ವೆಚ್ಚವನ್ನು ಸಂಬಂಧಪಟ್ಟ ಫಲಾನುಭವಿಯೇ ಭರಿಸತಕ್ಕದ್ದು.

ಮಾದರಿ ಹಾಗೂ ಸಣ್ಣ ನರ್ಸರಿ ಸ್ಥಾಪನೆಯ ಮೊದಲನೇ ವರ್ಷದಲ್ಲಿಯೇ ಸಸ್ಯೋತ್ಪಾದನೆಗೆ ಸಿದ್ಧತೆ ಪ್ರಾರಂಭಿಸುವುದು ಹಾಗೂ ಎರಡನೇ ವರ್ಷದಿಂದ ಪ್ರತಿ ವರ್ಷ ಮಾದರಿ ನರ್ಸರಿಯಲ್ಲಿ ಕನಿಷ್ಠ 2 ರಿಂದ 3 ಲಕ್ಷ ಸಸಿ/ ಕಸಿ ಗಿಡ ಹಾಗೂ ಸಣ್ಣ ನರ್ಸರಿಯಲ್ಲಿ ಕನಿಷ್ಠ 60 ರಿಂದ 70 ಸಾವಿರ ಸಸಿ/ ಕಸಿ ಗಿಡಗಳನ್ನು ಉತ್ಪಾದಿಸುವುದು. ಸಸ್ಯೋತ್ಪಾದನೆಗೆ ಅತ್ಯಾಧುನಿಕ ತಂತ್ರಜ್ಞಾನ ಉಪಯೋಗಿಸಿ ಶ್ರೇಷ್ಠ ಗುಣಮಟ್ಟದ ಗಿಡಗಳನ್ನು ಉತ್ಪಾದಿಸುವುದು.

**3. ಸಹಾಯಧನ ಪಡೆಯುವ ವಿಧಾನ:**

- ಫಲಾನುಭವಿ ಸಂಸ್ಥೆಯು ಮೊದಲ ನರ್ಸರಿ ಸ್ಥಾಪನೆಗೆ ಸಂಬಂಧಿಸಿದಂತೆ, ಸಮಗ್ರ ವಿವರವುಳ್ಳ ಯೋಜನ ವರದಿ ತಯಾರಿಸಿ ಸಂಬಂಧಿಸಿದ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರ ಮೂಲಕ ಔಷಧಿ ಬೆಳೆಗಳ ಮಿಷನ್ ನಿರ್ದೇಶಕರಿಗೆ ಸಲ್ಲಿಸಿ ಅನುಮತಿ ಪಡೆದುಕೊಳ್ಳುವುದು.
- ನರ್ಸರಿ ಪ್ರಾಜೆಕ್ಟ್ ಅನುಮೋದನೆಗೊಂಡ ನಂತರ ಸಂಬಂಧಿತ ಇಲಾಖೇತರ ಸಾರ್ವಜನಿಕ ಸಂಸ್ಥೆಗಳು ತೋಟಗಾರಿಕೆ ಇಲಾಖೆಯೊಡನೆ ಒಂದು ಒಡಂಬಡಿಕೆ (M.O.U) ಯನ್ನು ಸ್ಟ್ಯಾಂಪ್ ಪೇಪರ್ ಮೇಲೆ ಮಾಡಿಕೊಳ್ಳುವುದು. ಈ ಒಡಂಬಡಿಕೆಗೆ ಉಭಯ ಸಂಸ್ಥೆಗಳ ಸೂಚಿತ / ಅಧಿಕೃತ ಅಧಿಕಾರಿಗಳು ಒಪ್ಪಿಗೆ ಸೂಚಿಸಿ ಸಹಿ ಹಾಕಿರಬೇಕು. ಈ ಒಡಂಬಡಿಕೆಯನ್ನು ನಂತರ (ಅನುಷ್ಠಾನದ ಅವಧಿಯಲ್ಲಿ) ಯಾವುದೇ ಸಂದರ್ಭದಲ್ಲಿಯೂ ಉಲ್ಲಂಘಿಸದಂತೆ ಕಾಳಜಿ/ ಕ್ರಮ ವಹಿಸುವುದು.
- ತದನಂತರ, ಅನುಮೋದಿತ ಯೋಜನಾ ವರದಿಯಲ್ಲಿರುವ ವಿವರಗಳಿಗನುಗುಣವಾಗಿ ಮತ್ತು ಮಾರ್ಗಸೂಚಿಯನ್ವಯ ನರ್ಸರಿ ಅಭಿವೃದ್ಧಿಪಡಿಸುವುದು. ಅಭಿವೃದ್ಧಿಪಡಿಸಿದ ನರ್ಸರಿಯನ್ನು ಪರಿಪೂರ್ಣತೆಯನ್ನು ಖಚಿತಪಡಿಸಿಕೊಳ್ಳುವುದು.
- ಸಾರ್ವಜನಿಕ ವಲಯದ ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳು ಸಹಾಯಧನವನ್ನು ಮುಂಗಡವಾಗಿ ಪಡೆಯುವ ಅವಕಾಶವಿದ್ದರೂ ಸಹಾಯಧನ ಪಡೆದ ಒಂದು ವರ್ಷದೊಳಗೆ ಸಸ್ಯಾಗಾರ ಪೂರ್ಣ ಕಾರ್ಯನಿರ್ವಹಿಸಬೇಕಾಗುತ್ತದೆ. ಆದರೆ, ಖಾಸಗಿ ವಲಯದ ಸಂಸ್ಥೆಗಳು ನರ್ಸರಿ ಸ್ಥಾಪನೆ ಪೂರ್ಣಗೊಂಡ ನಂತರವೇ ಸಹಾಯಧನ ಪಡೆಯುವ ನಿಬಂಧನೆ ವಿಧಿಸಲಾಗಿದೆ.

| ನರ್ಸರಿ ವಲಯ | ಸಹಾಯಧನ ನೀಡುವ ವಿಧಾನ |
| --- | --- |
| ರಾಜ್ಯ ತೋಟಗಾರಿಕೆ ಇಲಾಖೆಯ ನರ್ಸರಿಗಳು | ಶೇ.100 ರಷ್ಟು ಮೊತ್ತವನ್ನು ಮುಂಗಡವಾಗಿ ಬಿಡುಗಡೆಗೊಳಿಸುವುದು. |
| ಕೃಷಿ ವಿಶ್ವವಿದ್ಯಾನಿಲಯ, ರಾಜ್ಯ/ಕೇಂದ್ರ ಸರ್ಕಾರದ ಸಂಶೋಧನಾ ಸಂಸ್ಥೆಗಳು / ಅಭಿವೃದ್ಧಿ ಸಂಸ್ಥೆಗಳು/ ಮಂಡಳಿಗಳು / ಸಹಕಾರ ವಲಯದ ನರ್ಸರಿಗಳು | ಶೇ.50 ರಷ್ಟು ಮೊತ್ತವನ್ನು ಮುಂಗಡವಾಗಿ ಬಿಡುಗಡೆಗೊಳಿಸುವುದು. ನಂತರ ಮೊದಲ ಕಂತಿನ ಹಣದ ಬಳಕೆ ಮತ್ತು ಅಭಿವೃದ್ಧಿ ಕಾರ್ಯಗಳ ಅನುಷ್ಠಾನವನ್ನು ಖಚಿತಪಡಿಸಿಕೊಂಡು ಉಳಿಕೆ ಶೇ.50 ರಷ್ಟು ಮೊತ್ತವನ್ನು ಬಿಡುಗಡೆಗೊಳಿಸಲಾಗುವುದು. ಈ ಎರಡೂ ಕಂತುಗಳನ್ನು ಒಂದು ವರ್ಷದ ಅವಧಿಯೊಳಗಡೆಯಾಗಿ ಬಿಡುಗಡೆಗೊಳಿಸುವುದು. |

**4. ತೋಟಗಾರಿಕೆ ಇಲಾಖಾ ಕ್ಷೇತ್ರಗಳಲ್ಲಿ ನರ್ಸರಿ ಅಭಿವೃದ್ಧಿ:**

ಇಲಾಖಾ ಕ್ಷೇತ್ರಗಳಲ್ಲಿ ಔಷಧಿ ಬೆಳೆಗಳ ನರ್ಸರಿ ಅಭಿವೃದ್ಧಿಪಡಿಸುವುದಾದಲ್ಲಿ, ಒಟ್ಟು ವೆಚ್ಚದ ಕನಿಷ್ಠ ಶೇ.60 ರಷ್ಟನ್ನು ಸಸ್ಯಾಭಿವೃದ್ಧಿಗೆ ಬಳಸತಕ್ಕದ್ದು. ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಯೋಜನಾ ವೆಚ್ಚದ ಶೇ.40 ಕ್ಕಿಂತ ಹೆಚ್ಚು ಅನುದಾನ ಬಳಸುವಂತಿಲ್ಲ. ವಿವಿಧ ಯೋಜನೆಗಳಡಿ ಈಗಾಗಲೇ ಮೂಲಭೂತ ಸೌಕರ್ಯಗಳ ಅಭಿವೃದ್ಧಿಯಾಗಿದ್ದಲ್ಲಿ, ಅದರ ಅನುದಾನವನ್ನು ಸಹ ಸಸ್ಯಾಭಿವೃದ್ಧಿಗೆ ಬಳಸಿಕೊಳ್ಳುವುದು. ಮೇಲ್ಕಾಣಿಸಿದ ಎಲ್ಲಾ ಮೂಲಭೂತ ಸೌಕರ್ಯಗಳು ಲಭ್ಯವಿದ್ದಲ್ಲಿ, ಯೋಜನಾ ವೆಚ್ಚದ ಸಂಪೂರ್ಣ ಮೊತ್ತವನ್ನು ಸಸ್ಯಾಭಿವೃದ್ಧಿಗೆ ಬಳಸಿಕೊಳ್ಳಲು ಅವಕಾಶವಿರುತ್ತದೆ.

ನರ್ಸರಿ ಅಭಿವೃದ್ಧಿ ಕುರಿತ ಯೋಜನಾ ವರದಿಯನ್ನು ತೋಟಗಾರಿಕೆ ಜಂಟಿ ನಿರ್ದೇಶಕರು (ಬಯೋಟೆಕ್ನಾಲಜಿ) ರವರಿಗೆ ಸಲ್ಲಿಸಿ, ಅನುಮೋದನೆ ಪಡೆದುಕೊಂಡ ನಂತರವೇ ಅನುಷ್ಠಾನ ಆರಂಭಿಸುವುದು.

ಸಸ್ಯಾಭಿವೃದ್ಧಿಗೆ ಬೆಳೆಗಳ ಆಯ್ಕೆ, ಸ್ಥಳೀಯ ಬೇಡಿಕೆ, ಯೋಜನೆಗಳಡಿಯಲ್ಲಿ ಔಷಧಿ ಬೆಳೆಗಳ ಪ್ರದೇಶ ವಿಸ್ತರಣೆ ಘಟಕದಡಿ ಅವಶ್ಯವಿರುವ ಬೆಳೆಗಳು, ಸಂಸ್ಕರಣೆ, ಮಾರುಕಟ್ಟೆ ಮತ್ತು ಮರು ಖರೀದಿ ಒಪ್ಪಂದಗಳನ್ನಾಧರಿಸಿ, ತೋಟಗಾರಿಕೆ ಉಪ ನಿರ್ದೇಶಕರು ನಿರ್ಧರಿಸುವುದು. ವಿವಿಧ ಔಷಧಿ ಬೆಳೆಗಳ ಉತ್ಪಾದನಾ ವೆಚ್ಚದ ವಿವರಗಳನ್ನು **ಅನುಬಂಧ –1** ರಲ್ಲಿ ನೀಡಲಾಗಿದೆ. **ಆದರೆ ಈ ಉತ್ಪಾದನಾ ವೆಚ್ಚಗಳು ಕೇವಲ ಸೂಚಿತವಾಗಿದ್ದು, ಯೋಜನಾವರದಿ ತಯಾರಿಸಿ ಸಲ್ಲಿಸಲು ಮಾತ್ರ ಸೀಮಿತವಾಗಿರುತ್ತವೆ. ಅಂತಿಮ ಉತ್ಪಾದನಾ ವೆಚ್ಚದ ಪಟ್ಟಿಯನ್ನು ಸದ್ಯದಲ್ಲೆ ಅನುಮೋದಿಸಿ ಕಳುಹಿಸಲಾಗುವುದು. ನಿರ್ದೇಶನಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲು ತಾತ್ಕಾಲಿಕ ಸೂಚಿತ ದರಗಳನ್ನೇ ಬಳಸಿಕೊಳ್ಳಲು ಸೂಚಿಸಲಾಗಿರುತ್ತದೆ.**

## ಅನುಬಂಧ –1

**ಔಷಧಿ ಬೆಳೆಗಳ ಉತ್ಪಾದನಾ ವೆಚ್ಚದ ವಿವರಗಳು:** (ತಾತ್ಕಾಲಿಕ ಸೂಚಿತ ದರಗಳು–**Temporary Indicative Costs**)

| ಕ್ರ. ಸಂ. | ಗಿಡಗಳ ಹೆಸರು | ಪಾಲಿಥೀನ್ ಚೀಲದ ಅಳತೆ (ಇಂಚುಗಳಲ್ಲಿ) | ಉತ್ಪಾದನಾ ವೆಚ್ಚ (ರೂ.ಗಳಲ್ಲಿ) |
|---|---|---|---|
| 1 | ಬಜೆ | 3x5 | 3.50 |
| 2 | ಅಲೋವಿರಾ | 4x6 | 3.50 |
| 3 | ನೆಲಬೇವು | 3x5 | 3.00 |
| 4 | ಆರ್ಟಿಮೀಸಿಯಾ | 3x5 | 3.00 |
| 5 | ಶತಾವರಿ | 4x6 | 6.00 |
| 6 | ಬೇವು | 5x8 | 6.00 |
| 7 | ಬಕೋಪ (ಬ್ರಾಹ್ಮಿ) | 3x5 | 3.00 |
| 8 | ಕೊಮ್ಮೆ | 3x5 | 3.00 |
| 9 | ಸಪ್ಪನ್ | 5x8 | 9.00 |
| 10 | ಒಂದೆಲಗ | 3x5 | 3.00 |
| 11 | ದಾಲ್ಚಿನ್ನಿ | 5x8 | 6.00 |
| 12 | ಕೋಕಂ | 5x8 | 12.00 |
| 13 | ಜಿನ್ನೆಮ (ಮಧುನಾಶಿನಿ) | 4x6 | 5.00 |
| 14 | ಕುಟಜ | 5x8 | 10.00 |
| 15 | ತುಳಸಿ | 3x5 | 3.50 |
| 16 | ನೆಲನೆಲ್ಲಿ | 3x5 | 3.50 |
| 17 | ಹಿಪ್ಪಳಿ | 3x5 | 3.50 |
| 18 | ರಾಸ್ನಾ | 4x6 | 4.00 |
| 19 | ಸ್ಟೀವಿಯಾ | 3x5 | 3.00 |
| 20 | ಅರ್ಜುನ | 5x8 | 10.00 |
| 21 | ತಾರೆ | 5x8 | 10.00 |
| 22 | ಅಳಲೆ | 5x8 | 15.00 |
| 23 | ಅಮೃತಬಳ್ಳಿ | 3x5 | 3.00 |
| 24 | ಲಕ್ಕಿ | 3x5 | 4.00 |
| 25 | ಅಶ್ವಗಂಧ | 3x5 | 3.00 |
| 26 | ನಾಗಕೇಸರ | 5x8 | 12.00 |
| 27 | ಅಗ್ನಿಮಂಥ | 4x6 | 5.00 |
| 28 | ಅಸನ | 5x8 | 10.00 |
| 29 | ಸರ್ಪಗಂಧ | 3x5 | 4.00 |
| 30 | ಏಕನಾಯಕ | 4x6 | 6.00 |
| 31 | ಅಶೋಕ | 5x8 | 10.00 |
| 32 | ಪಟಾಲ | 5x8 | 10.00 |
| 33 | ರೋಹಿತಕ | 5x8 | 10.00 |
| 34 | ಆನೆಮುಂಗು | 5x8 | 10.00 |
| 35 | ರಕ್ತ ಚಂದನ | 5x8 | 10.00 |
| 36 | ಶ್ರೀಗಂಧ | 4x6<br>5x8 | 5.00<br>7.00 |

**ಉತ್ಪಾದನಾ ವೆಚ್ಚದ ವಿವರಗಳು:**

| | **3" x 5"** | |
|---|---|---|
| ಕವರ್ | 0.25 | |
| ಮಣ್ಣು, ಮರಳು, ಗೊಬ್ಬರ | 1.25 | |
| ನಿರ್ವಹಣೆ | 1.50 | (3 ತಿಂಗಳು) |
| ಬೀಜ/ ಕಟಿಂಗ್ಸ್ | 0.50 | |
| | **3.50** | |

| | **4" x 6"** | |
|---|---|---|
| ಕವರ್ | 0.25 | |
| ಮಣ್ಣು, ಮರಳು, ಗೊಬ್ಬರ | 1.75 | |
| ನಿರ್ವಹಣೆ | 1.50 | (3 ತಿಂಗಳು) |
| ಬೀಜ/ ಕಟಿಂಗ್ಸ್ | 0.50 | |
| | **4.00** | |

| | **5"x 8"** | |
|---|---|---|
| ಕವರ್ | 0.50 | |
| ಮಣ್ಣು, ಮರಳು, ಗೊಬ್ಬರ | 3.00 | |
| ನಿರ್ವಹಣೆ | 1.00 | (5 ತಿಂಗಳು) |
| ಬೀಜ/ ಕಟಿಂಗ್ಸ್ | 2.50 | |
| | **7.00** | |

**5. ವಿಶೇಷ ಸೂಚನೆ:**

- ಸುಗಂಧ ಮತ್ತು ಔಷಧಿ ಬೆಳೆಗಳಿಗೆ ಸಂಬಂಧಿಸಿದಂತೆ ಜಮೀನು ಹೊಂದಿರುವ ಸೊಸೈಟಿ ಕಾಯ್ದೆ **1960** ಅಡಿ ನೋಂದಾಯಿತಗೊಂಡಿರುವ ಸುಗಂಧ ಮತ್ತು ಔಷಧಿ ಬೆಳೆಗಾರರ ಸಂಘ / ಬಳಗ/ಗುಂಪುಗಳು ಅಥವಾ ಆಸಕ್ತ ಖಾಸಗಿ ರೈತರ ಮೂಲಕವೂ ಸಹ ಈ ನರ್ಸರಿ ಯೋಜನೆ ಅನುಷ್ಠಾನಗೊಳಿಸಬಹುದಾಗಿದೆ.
- ನರ್ಸರಿ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರತಿ ತಿಂಗಳು ಭೌತಿಕ / ಆರ್ಥಿಕ ಪ್ರಗತಿ ವರದಿಗಳನ್ನು ಔಷಧಿ ಬೆಳೆಗಳ ಮಿಷನ್ ನಿರ್ದೇಶಕರಿಗೆ ಸಂಬಂಧಿಸಿದ ತೋಟಗಾರಿಕೆ ಉಪ ನಿರ್ದೇಶಕರ ಮೂಲಕ ನೀಡುವುದು.
- ಅನಾವಶ್ಯಕ ನಿರ್ಮಾಣಗಳು/ ಉಪಕರಣಗಳು/ ಎಲೆಕ್ಟ್ರಾನಿಕ್ ಉಪಕರಣಗಳು/ ಪೀಠೋಪಕರಣಗಳು/ ವಾಹನಗಳು ಇತ್ಯಾದಿಗಳನ್ನು ನರ್ಸರಿ ಅಭಿವೃದ್ಧಿಗೆ ನೀಡಲಾದ ಸಹಾಯಧನಕ್ಕೆ ಪರಿಗಣಿಸಲಾಗುವುದಿಲ್ಲ.
- Recurring ಮತ್ತು Non-Recurring ವೆಚ್ಚಗಳನ್ನು ಅನುಮೋದಿತ ಪ್ರಾಜೆಕ್ಟ್ ರಿಪೋರ್ಟ್ ಅನುಸಾರವಾಗಿಯೇ ಮಾಡುವುದು. ಅನಾವಶ್ಯಕ ವೆಚ್ಚಗಳನ್ನು ಮಾನ್ಯ ಮಾಡಲಾಗುವುದಿಲ್ಲ.
- ಯಾವುದೇ ಕಾರಣಕ್ಕೂ ಸಹಾಯಧನವನ್ನು ನಗದು (Cash) ರೂಪದಲ್ಲಿ ನೀಡಲಾಗುವುದಿಲ್ಲ.
- ಇಲಾಖೇತರ ಸಾರ್ವಜನಿಕ ವಲಯದಲ್ಲಿನ ಸಂಸ್ಥೆಗಳು ನಿರ್ಮಿಸಿದ ನರ್ಸರಿಗಳು ತೋಟಗಾರಿಕೆ ಇಲಾಖೆ ಇಚ್ಛಿಸಿದಲ್ಲಿ, ಇಲಾಖೆ ಮತ್ತು ಸಂಸ್ಥೆಗಳು ಪರಸ್ಪರ ಒಪ್ಪಿದ ದರದಲ್ಲಿ ಗಿಡಗಳನ್ನು ಇಲಾಖಾ ಕಾರ್ಯಕ್ರಮಗಳಿಗೆ ನೀಡಲು ಸಿದ್ಧರಿರಬೇಕು.

**6. ನಿಬಂಧನೆಗಳು:**

ಅರ್ಜಿ ಸಲ್ಲಿಸಿದ ಫಲಾನುಭವಿ ನರ್ಸರಿದಾರರು ಈ ಹಿಂದೆ ಯಾವುದಾದರೂ ಯೋಜನೆ ಅಡಿಯಲ್ಲಿ ಸದರಿ ನರ್ಸರಿಗೆ ಸಹಾಯಧನ ಪಡೆದಿದ್ದಲ್ಲಿ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿಯಲ್ಲಿ ಸಹಾಯಧನ ಪಡೆಯಲು ಅರ್ಹರಾಗಿರುವುದಿಲ್ಲ. ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರಿಗಳು ಹಾಗೂ ತಾಂತ್ರಿಕ ಸಮಿತಿಯು ಈ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಅಲ್ಲದೇ, ಈ ಸಹಾಯಧನ ಪಡೆದ ನಂತರ ಫಲಾನುಭವಿಯು ಇತರೆ ಯಾವುದೇ ಯೋಜನೆಯಡಿಯಲ್ಲಿ ಮತ್ತೆ ಸಹಾಯಧನ ಪಡೆಯಲು ಅರ್ಹತೆ ಹೊಂದುವುದಿಲ್ಲ.

ನರ್ಸರಿಯಲ್ಲಿ ಉತ್ಪಾದಿಸಿದ ಕಸಿ/ ಸಸಿ ಗಿಡಗಳ ಗುಣಮಟ್ಟ ಕಾಪಾಡುವುದು ಫಲಾನುಭವಿಗಳ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ. ಉತ್ಪಾದಿಸಿದ ಕಸಿ/ ಸಸಿಗಳ ಗುಣಮಟ್ಟ ದೃಢೀಕರಿಸಲು ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ ವತಿಯಿಂದ ಸ್ವತಂತ್ರ ದೃಢೀಕರಣ ಏಜೆನ್ಸಿಗಳನ್ನು ಗುರುತಿಸಿ ತಿಳಿಸಲಾಗುವುದು. ಖಾಸಗಿ ನರ್ಸರಿಗಳಿಗೂ ಸಹ, ಅವುಗಳ ಗುಣಮಟ್ಟ ಮತ್ತು ಪ್ರಾಮಾಣಿಕತೆಯನ್ನಾಧರಿಸಿ, ಸ್ವಪ್ರಮಾಣೀಕರಣ/ ಸ್ವದೃಢೀಕರಣ ಅರ್ಹತೆ ಕಲ್ಪಿಸಿಕೊಡಲು ಉತ್ತೇಜನ ನೀಡಲಾಗುವುದು. ಸ್ಥಳೀಯ ಬೇಡಿಕೆಯನ್ನಾಧರಿಸಿ ನರ್ಸರಿ ಫಲಾನುಭವಿಗಳು ಕೆಲವೇ ಕೆಲವು ಆಯ್ದ ಬೆಳೆಗಳು ಅಥವಾ ಹೆಚ್ಚು ಸಂಖ್ಯೆಯ ಔಷಧಿ ಬೆಳೆಗಳ ನರ್ಸರಿ ಅಭಿವೃದ್ಧಿಪಡಿಸಬಹುದಾಗಿರುತ್ತದೆ. ಈ ಬಗ್ಗೆ ಸ್ಪಷ್ಟ ಸ್ಪಷ್ಟೀಕರಣವನ್ನು ಯೋಜನಾ ವರದಿಯಲ್ಲಿ ನಮೂದಿಸುವುದು. ಜೊತೆಗೆ ಯೋಜನಾ ವರಧಿಯಲ್ಲಿ, ಹಾಲಿ ನರ್ಸರಿಗಳ ಸ್ಥಿತಿ–ಗತಿ ಮತ್ತು ಹೊಸ ನರ್ಸರಿಯ ಸ್ಥಾಪನೆಯ ಅವಶ್ಯಕತೆ ಬಗ್ಗೆ ವಿವರಗಳನ್ನು ಸಲ್ಲಿಸುವುದು.

# ಅಧ್ಯಾಯ-4

## ಪ್ರದೇಶ ವಿಸ್ತರಣೆಗೆ ಸಹಾಯಧನ

### ಪ್ರದೇಶ ವಿಸ್ತರಣೆ

ಔಷಧಿ ಕ್ಷೇತ್ರದ ವತಿಯಿಂದ ಔಷಧಿ ಗಿಡಗಳಿಗೆ ಭಾರೀ ಬೇಡಿಕೆ ಇದ್ದಾಗ್ಯೂ, ಔಷಧಿ ಬೆಳೆಗಳ ಸಾಗುವಳಿಯು ನಿರೀಕ್ಷಿತ ಪ್ರಮಾಣದಲ್ಲಿ ಪ್ರಾರಂಭವಾಗಿಲ್ಲ. ಇದಕ್ಕೆ ಮುಖ್ಯ ಕಾರಣ ಬಹಳಷ್ಟು ಕಚ್ಚಾ ಸಾಮಗ್ರಿ, ಕಡಿಮೆ ದರದಲ್ಲಿ ಅರಣ್ಯ ಮೂಲಗಳಿಂದ ದೊರೆಯುತ್ತಿರುವುದು. ಸಾಗುವಳಿಯನ್ನು ಲಾಭದಾಯಕವಾಗಿ ಮಾಡುವ ದೃಷ್ಠಿಯಿಂದ, ತಾಂತ್ರಿಕ ಮತ್ತು ಆರ್ಥಿಕ ಉತ್ತೇಜನವನ್ನು ರೈತ ಸಮುದಾಯಕ್ಕೆ ನೀಡುವ ಅವಶ್ಯಕತೆಯಿದೆ. 10 ನೇ ಪಂಚವಾರ್ಷಿಕ ಯೋಜನೆಯಡಿ, ವಿವಿಧ ಯೋಜನೆಗಳಡಿ, ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ಪರಿಣಾಮವಾಗಿ, ಅಳಿವಿನಂಚಿನಲ್ಲಿರುವ ಪ್ರಭೇದಗಳು ಮತ್ತು AYUSH ರಂಗದಿಂದ ಭಾರೀ ಬೇಡಿಕೆ ಇರುವ ಬೆಳೆಗಳ ಪ್ರದೇಶ ವಿಸ್ತರಣೆ ಮತ್ತು ಉತ್ಪಾದನೆಯಲ್ಲಿ ಹೆಚ್ಚಳವಾಗಿರುತ್ತದೆ. ಆದರೆ AYUSH ರಂಗದಿಂದ ಬೇಡಿಕೆಯಲ್ಲಿರುವ ಇನ್ನು ಅನೇಕ ಪ್ರಭೇದಗಳು, ಸಾಗುವಳಿಯಾಗದೇ, ಅರಣ್ಯ ಮೂಲಗಳಿಂದಲೇ ಬೇಡಿಕೆ ಪೂರೈಸಲ್ಪಡುತ್ತಿರುವುದರಿಂದ, ಇವುಗಳ ಸಾಗುವಳಿಯನ್ನು ಸಹ ಉತ್ತೇಜಿಸಬೇಕಿದ್ದು, ಔಷಧಿ ಬೆಳೆಗಳ ಮಿಷನ್ ಅಡಿ ಇದಕ್ಕೆ ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ. ಈ ಬೆಳೆಗಳಿಗೆ ಸಹಾಯಧನ ಪ್ರಮಾಣವನ್ನು ಪರಿಷ್ಕರಿಸಲಾಗಿದ್ದು, ಔಷಧಿ ಕ್ಷೇತ್ರದಲ್ಲಿ ಬೇಡಿಕೆಯಲ್ಲಿರುವ ಹಾಗೂ ಸಂರಕ್ಷಣಾ ಪ್ರಾಮುಖ್ಯತೆ ಹೊಂದಿರುವ ಪ್ರಭೇದಗಳ ಸಾಗುವಳಿಗೆ ಉತ್ತೇಜನಕಾರಿಯಾಗಲಿದೆ.

ಈಗಾಗಲೇ ಲಭ್ಯವಿರುವ ಸಂಸ್ಕರಣಾ ಘಟಕ ಮತ್ತು ಮಾರುಕಟ್ಟೆ ಸೌಕರ್ಯಗಳನ್ನಾಧರಿಸಿ ಹಾಗೂ ಈ ಸೌಕರ್ಯಗಳಿಗೆ ವ್ಯವಸ್ಥೆಯನ್ನು ಸಮಾನಾಂತರವಾಗಿ ಕಲ್ಪಿಸಿಕೊಂಡು, ಪ್ರದೇಶ ವಿಸ್ತರಣೆ ಕಾರ್ಯಕ್ರಮ ರೂಪಿಸಿ ಜಾರಿಗೊಳಿಸುವುದು. ಇದನ್ನು ಸ್ವಸಹಾಯ ಗುಂಪುಗಳು, ರೈತ ಸಮೂಹಗಳು, ಔಷಧಿ ಬೆಳೆಗಳ ಸಹಕಾರಿ ಸಂಘಗಳು ಇತ್ಯಾದಿ ಸಂಘಟನೆಗಳನ್ನು ಸಂಘಟಿಸುವ ಮೂಲಕ, ಗೊಂಚಲು ಮಾದರಿಯಲ್ಲಿ ಅನುಷ್ಠಾನಗೊಳಿಸುವುದು. ಇದರಿಂದ ಯೋಜನೆಯ ಲಾಭವನ್ನು ವ್ಯಕ್ತಿ ಕೇಂದ್ರೀಕೃತ ದೊಡ್ಡ ರೈತರಿಗೆ ಮಾತ್ರ ತಲುಪಿಸುವುದರ ಬದಲಾಗಿ, ಸಂಘಟನೆಗಳ ಸಣ್ಣ ಮತ್ತು ಅತಿ ಸಣ್ಣ ರೈತರಿಗೂ ಪರಿಣಾಮಕಾರಿಯಾಗಿ ದೊರಕಿಸಲು ಸಾಧ್ಯವಾಗುತ್ತದೆ. ಹಾಗೂ ಪ್ರತಿ ರೈತನ ಹಿಡುವಳಿ ಸಣ್ಣದಾದರೂ, ಒಟ್ಟಾರೆ ಗೊಂಚಲು ಪ್ರದೇಶದ ಗಾತ್ರ ಸಾಕಷ್ಟು ದೊಡ್ಡ ಪ್ರಮಾಣದಲ್ಲಿರುವುದರಿಂದ, ಕೊಯ್ಲೋತ್ತರ ಮತ್ತು ಸಂಸ್ಕರಣಾ ಸೌಕರ್ಯಗಳನ್ನು ಕಲ್ಪಿಸಲು ಹಾಗೂ ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಡಲು ಇದು ಅನುವಾಗುತ್ತದೆ. ಔಷಧಿ ಬೆಳೆಗಾರರ ಗುಂಪು / ಸಮೂಹ/ ಸಹಕಾರಿ ಸಂಘಗಳನ್ನು ಸಂಘಟಿಸಲು ಹಾಗೂ ಗೊಂಚಲು ಆಧಾರಿತ ಯೋಜನಾ ವರದಿಗಳನ್ನು ಸಿದ್ಧಪಡಿಸಲು ಸಹ ರಾಜ್ಯ ಔಷಧಿ ಬೆಳೆಗಳ ಮಿಷನ್ ಅನುಷ್ಠಾನ ಏಜೆನ್ಸಿಗೆ ಹಣಕಾಸಿನ ವ್ಯವಸ್ಥೆ ಕಲ್ಪಿಸಿಕೊಳ್ಳಬಹುದಾಗಿರುತ್ತದೆ.

ಪ್ರದೇಶ ವಿಸ್ತರಣೆಗೆ ಅಗತ್ಯವಿರುವ ಸಸ್ಯ ಸಾಮಗ್ರಿ ಮೂಲಗಳನ್ನು ಮೊದಲೇ ಗುರುತಿಸಿರಬೇಕು. ದೃಢೀಕೃತ ಅರ್ಹ ಮೂಲಗಳಿಂದ ಉತ್ತಮ ಗುಣಮಟ್ಟದ ಬೀಜ / ಸಸಿ/ ಕಸಿಗಳನ್ನು ಮಾತ್ರ ಪ್ರದೇಶ ವಿಸ್ತರಣೆಗೆ ಬಳಸುವುದು. ಇದಕ್ಕೆ ಅನುವಾಗುವಂತೆ ಗುಣಮಟ್ಟದ ಸಸ್ಯ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲು, ಯೋಜನೆಯಡಿ ಲಭ್ಯವಿರುವ ನರ್ಸರಿಗಳ ಅಭಿವೃದ್ಧಿಗೆ ಅವಕಾಶ ಕಲ್ಪಿಸಿಕೊಳ್ಳಬಹುದು.

ಪ್ರದೇಶ ವಿಸ್ತರಣೆಗೆ ಆಯ್ಕೆಮಾಡಲಾಗಿರುವ ಔಷದಿ ಬೆಳೆಗಳ ಪಟ್ಟಿ ಮತ್ತು ಅವುಗಳ ಬೇಸಾಯಕ್ಕೆ ತಗಲುವ ಘಟಕ ವೆಚ್ಚದ ವಿವರಗಳು, ಔಷಧಿ ಕ್ಷೇತ್ರದ ಬೇಡಿಕೆ, ಸ್ವಾಭಾವಿಕ ಅರಣ್ಯಗಳಲ್ಲಿ ಪ್ರಭೇದಗಳ ಲಭ್ಯತೆ ಮತ್ತು ಅಳಿವು/ ವಿನಾಶದ ಅಂಚಿನಲ್ಲಿರುವ ಪ್ರಭೇದಗಳ ಆಧಾರದ ಮೇಲೆ, ಸಹಾಯಧನದ ಪ್ರಮಾಣವನ್ನು ಶೇ.20, ಶೇ.50 ಮತ್ತು ಶೇ.75 ರ ಪ್ರಮಾಣದಲ್ಲಿ ನೀಡಲಾಗುವುದು. ಈ ಮೂರು ವಿಭಾಗಗಳಲ್ಲಿ ಸಹಾಯಧನಕ್ಕೆ ಗುರುತಿಸಲಾಗಿರುವ ಪ್ರಭೇದಗಳ ಪಟ್ಟಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

# <u>ಅನುಬಂಧ–2</u>

## ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಅಡಿ ನಿಗಧಿಪಡಿಸಲಾಗಿರುವ ಸಹಾಯಧನದ ವಿವರಗಳ ಪಟ್ಟಿ

### A. ಶೇ.20 ರಷ್ಟು ಸಹಾಯಧನಕ್ಕೆ ಅರ್ಹವಿರುವ ಔಷಧಿ ಬೆಳೆಗಳ ಪಟ್ಟಿ

| ಕ್ರ.ಸಂ. | **Botanical Name** | **Common Name** | ಕನ್ನಡದ ಹೆಸರು | ತಳಿ | ಅಂತರ | ಗಿಡಗಳ ಸಂಖ್ಯೆ (ಪ್ರತಿ ಹೆಕ್ಟೇರ್‌ಗೆ) | ಉತ್ಪಾದನಾ ವೆಚ್ಚ (ರೂ.ಗಳಲ್ಲಿ) | | ಸಹಾಯಧನದ ಪ್ರಮಾಣ (ರೂ.ಗಳಲ್ಲಿ) | |
|---|---|---|---|---|---|---|---|---|---|---|
| | | | | | | | (ಪ್ರತಿ ಹೆಕ್ಟೇರ್‌ಗೆ) | ಪ್ರತಿ ಎಕರೆಗೆ) | (ಪ್ರತಿ ಹೆಕ್ಟೇರ್‌ಗೆ) | ಪ್ರತಿ ಎಕರೆಗೆ) |
| 1 | Acorus calamus Linn. | Vach | ಬಜೆ | - | 30 cm x 30 cm | 1,11,111 | 62,500 | 25,000 | 12,500 | 5000 |
| 2 | Aloe vera (Linn.) Burn. | Ghritkumari | ಲೋಳೆಸರ | | 60x30cm / 60x45 cm | 37037 | 42,500 | 17,000 | 8500 | 3400 |
| 3 | Andrographis paniculata (Burm.f) Wall ex.Nees | Kalmegh | ನೆಲಬೇವು | - | 30x30 cm | 1,11,111 | 25,000 | 10,000 | 5000 | 2500 |
| 4 | Artemisia annua Linn. | Artemisia | | | Broadcasting | 2.5 kg | - | - | | |
| 5 | Asparagus racemosus Willd. | Shatavari | ಶತಾವರಿ | | 60x60 cm | 27777/2.5 t/ha (rhizomes) | 62,500 | 25,000 | 12,500 | 5000 |
| 6 | Azadirachta indica A.Juss | Neem | ಬೇವು | | 3 x 3 m | 1111 | 37,500 | 15,000 | 7500 | 3000 |
| 7 | Bacopa monnieri (L.) Pennell | Brahmi | ಬ್ರಾಹ್ಮಿ | Subodhak | 30x30 cm | 111111 | 40,000 | 16,000 | 8000 | 3200 |
| 8 | Boerhaavia diffusa Linn. | Punarnava | ಪುರ್ನನವ /ಕೊಮ್ಮೆ | | 30 x 30 cm | 111111 | 30,000 | 12,000 | 6000 | 2400 |
| 9 | Cassia angustifolia Vahl. | Senna | ಸೆನ್ನಾ | ALFT-2 Sona | 30x30 cm | 111111 | 25,000 | 10,000 | 5000 | 2000 |
| 10 | Caesalpinia sappan Linn. | Patang | ಸಪ್ಪನ್ | | 5x5m | 400 | - | - | - | - |
| 11 | Centella asiatica (Linn.) Urban | Mandookparni | ಒಂದೆಲಗ | | 30 x 30 cm | 111111 | 40,000 | 16,000 | 8000 | 3200 |
| 12 | Chlorophytum borivillianum Sant. | Safed Musali | ಸಫೇದ್ ಮುಸ್ಲಿ | | 30 x 30 cm | 111111 / 1000 kg/ha | 3,12,500 | 1,25,000 | 62,500 | 25,000 |
| 13 | Cinnamomum zeylanicum Cinnamomum verum Presl C.tamala (Buch.-Ham.) Nees ex.Brem. C.Camphora (L.) Presl. | Dalchini, Tejpat, Kapoor | ಚಕ್ಕೆ | | 3x3m | 1111 | 77,500 | 31,000 | 15,500 | 6200 |

| | | | | | | | | | | |
|---|---|---|---|---|---|---|---|---|---|---|
| 14 | Coleus barbatus Benth. Coleus forskholii | Pather Chur | | Germai, Maimal, K-8 | 60x30cm | 55555 | 43,000 | 17,200 | 8600 | 3440 |
| 15 | Coleus vettiveroides K.C.Jacob | Hrivera | | | 60x30cm | 55555 | 43,000 | 17,200 | 8600 | 3440 |
| 16 | Convolvulus microphyllus Sieb ex Spreng | Shankapushpi | ಶಂಖಪುಷ್ಪಿ | | 1 x 1m | 10000 (Staking) | - | - | | |
| 17 | Cryptolepis buchanani Roem & schult | Krsna sariva | ಕೃಷ್ಣಸಾರೀವ | | NA | | - | - | | |
| 18 | Digitalis purpurea Linn. | Foxglove | | EC115996 ,D76,D21, DYF, DPF | 45x30cm | 74074 plt/ha | - | - | | |
| 19 | Dioscorea bulbifera Linn. | Rotalu, Gethi | | | 45x30 cm/ 60x30 cm | 74074 | 62,500 | 25,000 | 12,500 | 5000 |
| 20 | Embelia ribes Burm. F. | Vai Vidang | ವಾಯುವಿಡಂಗ | | 60x60 cm | 27777 | 42,500 | 17,000 | 8500 | 3400 |
| 21 | Garcinia indica Choisy | Kokum | ಕೋಕಂ/ ಪುನರ್ಪುಳಿ | | 3m x3m | 1111 | 62,500 | 25,000 | 12,500 | 5000 |
| 22 | Ginkgo biloba | Ginkgo | | | 10m x 10m | 100 | - | - | | |
| 23 | Gymnema sylvestre R.Br. | Gudmar | ಮಧುನಾಶಿನಿ | | 2.5 x 1.8 m | 2222 | 25,000 | 10,000 | 5000 | 2000 |
| 24 | Hedychium spicatum Buch Ham. Ex-Smuth | Kapur kachari | | | 1m x 1m | 10,000 | - | - | | |
| 25 | Hemidesmus indicus R.Br. | Anantmool, Indian Sarsaparilla | ಅನಂತಮೂಲ | | 45cm x 45cm | 49,382 | 35,000 | 14,000 | 7000 | 2800 |
| 26 | Holarrhena antidysenterica Wall. | Kurchi/Kutaj | ಕುಟಜ | | 3m x 3m | 1,111 | - | - | | |
| 27 | Ipomoea petaloidea Choisy | Vrddhadaruka | | | 1m x 1m | 10,000 | - | - | | |
| 28 | Ipomoea turpethum R.Br. | Trivrit | | | 1m x 1m | 10,000 | - | - | | |
| 29 | Litsea glutinosa (Lour) C.B.Bob. | Listea | | | NA | | - | - | | |
| 30 | Lepidum sativum Linn. | Chandrasur | | - | 30 x 10cm | 3,33,333 | - | - | | |
| 31 | Mucuna prurita Linn. | Konch | ನಸುಗುನ್ನಿ | | 60 cm x45 cm | 37,037 | 20,000 | 8,000 | 4000 | 1600 |

| | | | | | | | | | | |
|---|---|---|---|---|---|---|---|---|---|---|
| 32 | Ocimum sanctum Linn. | Tulsi | ತುಳಸಿ | | 45x30 cm | 74,074 | 30,000 | 12,000 | 6000 | 2400 |
| 33 | Phyllanthus amarus Schum & Thonn. | Bhumi amlaki | ನೆಲನೆಲ್ಲಿ | - | 30 x 30cm | 1,11,111 | 27,500 | 11,000 | 5500 | 2200 |
| 34 | Phyllanthus emblica Linn. | Amla | ನೆಲ್ಲಿ | Banarasi, Chakiya, Francis, NA-4, NA-5, NA-6, NA-7, NA-10 | 3 m x 3 m | 1,111 | 65,000 | 26,000 | 13,000 | 5200 |
| 35 | Piper longum Linn. | Pippali | ಹಿಪ್ಪಲಿ | Vishwam, GO1 thippali, Suvali | 60 x60 cm | 27,777 | 62,500 | 25,000 | 12,500 | 5000 |
| 36 | Pluchea lanceolata (DC) CB Clark. | Rasna | ರಾಸ್ನ | | NA | | - | - | | |
| 37 | Solanum nigrum Linn. | Makoy | ಮಕಾಯಿ | | 60x45cm / 45x45 cm | 200-250 gm / ha seeds | 25,000 | 10,000 | 5000 | 2000 |
| 38 | Stevia rebaudiana Bertoni | Madhukari | ಮಧುವಂತ | | 45 cm x 22.5 cm | 98,765 | 3,12,500 | 1,25,000 | 62,500 | 25,000 |
| 39 | Terminalia arjuna (Roxb.) Wt. & Arn. | Arjuna | ಅರ್ಜುನ | | 3 m x 3m | 1,111 | 45,000 | 18,000 | 9000 | 3600 |
| 40 | Terminalia bellirica Gaertn. | Behera | ತಾರೆ | | 3m x 3m | 1,111 | 40,000 | 16,000 | 8000 | 3200 |
| 41 | Terminalia chebula Retz. | Harad | ಅಳಲೆ | | 3m x 3m | 1,111 | 40,000 | 16,000 | 8000 | 3200 |
| 42 | Tinospora cordifolia Miers | Giloe | ಅಮೃತಬಳ್ಳಿ | | 1m x 1m | 10,000 | 27,500 | 11,000 | 5500 | 2200 |
| 43 | Vitex nigundo Linn. | Nirgundi | ಲಕ್ಕಿ | | 3m x 3m | 1,111 | - | - | | |
| 44 | Withania somnifera (Linn.) Dunal | Ashwagandha | ಅಶ್ವಗಂಧ | Jawahar Ashwagandh-20, WS 22,WS134 Rakshitha | 30 cm x 15 cm Broad casting | 10-12 kg seeds/ha | 25,000 | 10,000 | 5000 | 2000 |
| 45 | Woodfordia fruticosa Kurz. | Dhataki | | | 5m x 5m | 400 | - | - | - | - |

**B. ಶೇ.50 ರಷ್ಟು ಸಹಾಯಧನಕ್ಕೆ ಅರ್ಹವಿರುವ ಔಷಧಿ ಬೆಳೆಗಳ ಪಟ್ಟಿ**

| # | Botanical Name | Common Name | ಕನ್ನಡದ ಹೆಸರು | ತಳಿ | ಅಂತರ | ಗಿಡಗಳ ಸಂಖ್ಯೆ (ಪ್ರತಿ ಹೆಕ್ಟೇರ್‌ಗೆ) | ಉತ್ಪಾದನಾ ವೆಚ್ಚ (ರೂ.ಗಳಲ್ಲಿ) | | ಸಹಾಯಧನದ ಪ್ರಮಾಣ (ರೂ.ಗಳಲ್ಲಿ) | |
|---|---|---|---|---|---|---|---|---|---|---|
| | | | | | | | (ಪ್ರತಿ ಹೆಕ್ಟೇರ್‌ಗೆ) | ಪ್ರತಿ ಎಕರೆಗೆ) | (ಪ್ರತಿ ಹೆಕ್ಟೇರ್‌ಗೆ) | ಪ್ರತಿ ಎಕರೆಗೆ) |
| 46 | Aegle marmelos (Linn)Corr. | Bael | ಬಿಲ್ವ | | 5m x5m | 400 | 40,000 | 16,000 | 20,000 | 8000 |
| 47 | Albizzia lebbeck Benth. | Shirish | | | 3m x 3m | 1111 | 37,500 | 15,000 | 18750 | 7500 |
| 48 | Alstonia scholaris R.Br. | Satvin, Saptaparna | ಸಪ್ತ ಪರ್ಣ | | 5m x 5m | 400 | - | - | | |
| 49 | Altingia excelsa Noronha | Silarasa | | | 5m x 5m | 400 | - | - | | |
| 50 | Anacyclus pyrethrum DC. | Akarkara | | | 60 x 60cm | 27,777 | - | - | | |
| 51 | Atropa belledona Royle | Belledona | | | 60x45cm | 37037 | 62,500 | 25,000 | 31,250 | 12,500 |
| 52 | Coscinum fenestratum (Gartn) Colebr. | Peela Chandan | | | 3m x 3m | 1111 | - | - | | |
| 53 | Crataeva nurvala Buch-Ham. | Varun | | | 5m x 5m | 400 | - | - | | |
| 54 | Dactylorhiza hatagirea (D.Don) Soo | | | | NA | | - | - | | |
| 55 | Gloriosa superba Linn. | Kalihari | ಗೌರಿ ಹೂ | - | 45 x30 cm | 1000kg /ha | 1,37,500 | 55,000 | 68,750 | 27,500 |
| 56 | Glycyrrhiza glabra Linn. | Liquorice, Mulethi | ಯೇಷ್ಟಿಮಧು/ ಅತಿಮಧು | Hariyana Mulethi No.1, EC111236 | 60x30 cm | 55,555 | 1,00,000 | 40,000 | 50,000 | 20,000 |
| 57 | Gmelina arborea Linn. | Gambhari | ಶಿವನಿ | | 5m x 5m | 400 | 45,000 | 18,000 | 22,500 | 9000 |
| 58 | Hippophae rhamnoides Linn. | Seabuckthorn | | | NA | | 50,000 | 20,000 | 25,000 | 10,000 |
| 59 | Inula racemosa Hk.f. | Pushkarmool | | | NA | | 37,800 | 15,120 | 18,900 | 7560 |
| 60 | Leptadenia reticulata (Retz) Wt. & Arn. | Jivanti | ಜೀವಂತಿ | | 1m x1m | 10,000 | - | - | | |
| 61 | Mesua ferrea Linn. | Nagakeshar | ನಾಗಕೇಸರ | | 5m x 5m | 400 | - | - | | |

| | | | | | | | | | | |
|---|---|---|---|---|---|---|---|---|---|---|
| 62 | Panax pseudo ginseng Wall. | Ginseng | | | 15x5cm | 13,33,333<br>Can not be grown in Inida | | - | | |
| 63 | Parmelia perlata Ach. | Saileya | | | NA | | - | - | | |
| 64 | Piper cubeba Linn.f. | Kababchini | | | 1m x 1m | 10,000 | - | - | | |
| 65 | Plumbago zeylanica Linn. | Chitrak | | | 60 x 45cm | 37037 | - | - | | |
| 66 | Pueraria tuberosa DC. | Vidarikand | | | NA | | - | - | | |
| 67 | Premna integrifolia Linn. | Agnimanth | ಅಗ್ನಿಮಂಥ | | 3m x3m | 1111 | - | - | | |
| 68 | Pterocarpus marsupium Roxb. | Beejasar | ಅಸನ | | 5m x 5m | 400 | - | - | | |
| 69 | Rauwolfia serpentine Benth. Ex Kurz | Sarpgandha | ಸರ್ಪಗಂಧ | RS-1 | 45 cmx 30 cm | 74074 | 62,500 | 25,000 | 31,250 | 12,500 |
| 70 | Salacia reticulate Wight, Salacia oblongata Wall ex. Wt & Arn. | Saptachakra (Saptarangi) | ಏಕನಾಯಕ | | 2.5 x2.5m | 1600 | - | - | | |
| 71 | Saraca asoca (Roxb.) De Wilde | Ashok | ಅಶೋಕ | | 3m x 3m | 1111 | 62,500 | 25,000 | 31,250 | 12,500 |
| 72 | Smilax china Linn. | Hrddhatri (Madhu snuhi), Chob Chini Lokhandi | | | NA | | - | - | | |
| 73 | Stereospermum suaveolens DC. | Patala | ಕೃಷ್ಣಪಟಾಲ | | 5m x 5m | 400 | - | - | | |
| 74 | Tecomella undulate (Sm.) Seem. | Rohitak | | | 5m x 5m | 400 | - | - | | |
| 75 | Tylophora asthmatica (Linn.f.) Wight & Arn. | Damabooti | | | 1m x 1m | 10,000 | - | - | | |
| 76 | Taxus wallichiana Linn. | Thuner, Talispatra | | | 8 to 10m | 1250 | - | - | | |
| 77 | Urarea picta (Jacq.) Desv. | Prishnaparni | | | NA | | - | - | | |

## C. ಶೇ. 75 ರಷ್ಟು ಸಹಾಯಧನಕ್ಕೆ ಅರ್ಹವಿರುವ ಔಷಧಿ ಬೆಳೆಗಳ ಪಟ್ಟಿ

| # | Botanical Name | Common Name | ಕನ್ನಡದ ಹೆಸರು | ತಳಿ | ಅಂತರ | ಗಿಡಗಳ ಸಂಖ್ಯೆ (ಪ್ರತಿ ಹೆಕ್ಟೇರ್‌ಗೆ) | ಉತ್ಪಾದನಾ ವೆಚ್ಚ (ರೂ.ಗಳಲ್ಲಿ) | | ಸಹಾಯಧನದ ಪ್ರಮಾಣ (ರೂ.ಗಳಲ್ಲಿ) | |
|---|---|---|---|---|---|---|---|---|---|---|
| | | | | | | | (ಪ್ರತಿ ಹೆಕ್ಟೇರ್‌ಗೆ) | ಪ್ರತಿ ಎಕರೆಗೆ) | (ಪ್ರತಿ ಹೆಕ್ಟೇರ್‌ಗೆ) | ಪ್ರತಿ ಎಕರೆಗೆ) |
| 78 | Aconitum ferox Wall./A.balfouri | Vatsnabh | | | NA | | - | - | - | - |
| 79 | Aconitum heterophyllum Wall. Ex Royle | Atees | | - | NA | 1,10,000 | 1,10,000 | 44,000 | 82,500 | 33,000 |
| 80 | Aquilaria agallocha Roxb. | Agar | ಅಗಾರ್‌ವುಡ್ | | 5m x 5m | 400 | - | - | - | - |
| 81 | Berberis aristata DC. | Daruhaldi | | - | 5m x 5m | 400 | 62,500 | 25,000 | 46,875 | 18,750 |
| 82 | Commiphora wightii (Arn.) Bhandari | Guggal | ಗುಗ್ಗುಳ | Marusudha | 3m x 3m | 1111 | 1,60,000 | 64,000 | 1,20,000 | 48,000 |
| 83 | Ferula foetida Regel. | Hing | | | Not available in India | | - | - | | |
| 84 | Gentiana kurroo Royle | Trayamana | | | - | - | - | - | | |
| 85 | Nardostachys jatamansi DC. | Jatamansi | | | 20x20/ 30x30cm | 2,50,000/ 1,11,111 | 2,02,000 | 81,000 | 1,51,500 | 60,750 |
| 86 | Oroxylum indicum Vent. | Syonaka | ಆನೆಮುಂಗು | | 3mx3m | 1111 | - | - | - | - |
| 87 | Picrorhiza kurroa Benth. Ex Royle | Kutki | | - | NA | 1,10,000 | 1,12,500 | 45,000 | 84,375 | 33,750 |
| 88 | Podophyllum hexandrum Royle. | Bankakri,Indian podophyllum | | - | 30x30cm | 1,11,111 | 1,00,000 | 40,000 | 75,000 | 30,000 |
| 89 | Polygonatum cirrhifolium Wall. | Mahameda | | | NA | - | - | - | - | - |
| 90 | Pterocarpus santalinus Linn.f. | Raktachandan, Red sanders | ರಕ್ತಚಂದನ | | 5mx5m | 400 | - | - | - | - |
| 91 | Santalum album Linn. | Chandan | ಶ್ರೀಗಂಧ | - | 5mx5m | 400 | 86,350 | 34,540 | 64,762 | 25,905 |
| 92 | Saussurea costus C.B.Clarke | Kuth, Kustha | | | 60x60cm | 27,777 | 87,500 | 35,000 | 65,625 | 26,250 |
| 93 | Swrtia chirata Buch-Ham | Chirata, Charayatah | | - | 60 x 60 / 60x45 cm | 27,700/ 37,037 | 82,500 | 33,000 | 61,875 | 24,750 |

## 1. ಟಿಪ್ಪಣಿ:

1. ಬೆಳೆಗಳ ಉತ್ಪಾದನಾ ವೆಚ್ಚವನ್ನು NABARD, CSIR, ICAR, ICFRE, NHB, Forest Department ಮತ್ತಿತರೆ ಮೂಲಗಳಿಂದ ಸಿದ್ಧಪಡಿಸಲಾಗಿದೆ.
2. ಉತ್ಪಾದನಾ ವೆಚ್ಚವನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಅವಶ್ಯ ಪರಿಕರಗಳ ವೆಚ್ಚ ಮತ್ತು ಅತ್ಯುತ್ತಮ ಗುಣಮಟ್ಟದ ಬೀಜ/ ಸಸಿ/ಕಸಿ ವೆಚ್ಚಗಳನ್ನಾಧರಿಸಿ ಸಿದ್ಧಪಡಿಸಲಾಗಿದೆ.
3. ಮೇಲ್ಕಾಣಿಸಿದ ದರಗಳು ಜಮೀನು, ಮೂಲಭೂತ ಸೌಕರ್ಯ ಮತ್ತು ಕೂಲಿ ವೆಚ್ಚಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ.
4. ಬೇಡಿಕೆ ಮತ್ತು ಅವಶ್ಯಕತೆಗಳನ್ನಾಧರಿಸಿ, ಉತ್ಪಾದನಾ ವೆಚ್ಚಗಳ ವಿವರಗಳೊಂದಿಗೆ, ಪಟ್ಟಿಗೆ ಹೊಸ ಪ್ರಭೇದಗಳನ್ನು ಸೇರಿಸಬಹುದಾಗಿರುತ್ತದೆ.
5. ಹೆಕ್ಟೇರ್‌ವಾರು ಇರಬೇಕಾದ ಕನಿಷ್ಠ ಗಿಡಗಳ ಸಂಖ್ಯೆಯು ಸಲಹಾತ್ಮಕವಾಗಿದ್ದು, ಸುಧಾರಿತ ತೋಟಗಾರಿಕೆ ಬೇಸಾಯ ಕ್ರಮಗಳ ಪ್ರಕಾರ ವಿವಿಧ ಅಂತರಗಳಿಗೆ ಅನುಗುಣವಾಗಿ ಗಿಡಗಳ ಸಂಖ್ಯೆಯಲ್ಲಿ ವ್ಯತ್ಯಾಸ ವಾಗುವುದಿದ್ದಲ್ಲಿ, ಅದನ್ನು ಸಹ ಪರಿಗಣಿಸಬಹುದಾಗಿದೆ.

## 2. ಪ್ರದೇಶ ವಿಸ್ತರಣೆ ಅನುಷ್ಠಾನ ಸಂದರ್ಭದಲ್ಲಿ ಗಮನಿಸಬೇಕಾದ ಅಂಶಗಳು

- ರೈತರು / ಅರ್ಹ ಸಂಘ ಸಂಸ್ಥೆಗಳು ಈ ಸಹಾಯಧನ ಪಡೆಯಲು ಅರ್ಹರು.
- ಫಲಾನುಭವಿಗಳು ಜಮೀನನ್ನು ತಮ್ಮ ಸ್ವಂತ ಹೆಸರಿನಲ್ಲಿ ಹೊಂದಿರಬೇಕು. ಬಹುವಾರ್ಷಿಕ ಬೆಳೆಗಳಾದಲ್ಲಿ, ಒಂದು ವರ್ಷದಿಂದೀಚೆಗೆ (ಅಂದರೆ ಮೇ–2008 ರ ನಂತರ) ನಾಟಿ ಮಾಡಿದ ತಾಕುಗಳನ್ನು ಮಾತ್ರ. ಸಹಾಯಧನಕ್ಕೆ ಪರಿಗಣಿಸುವುದು. ಸಹಾಯಧನ ವಿತರಿಸುವ ಸಂದರ್ಭದಲ್ಲಿ ನಾಟಿ ಮಾಡಿ ಕನಿಷ್ಠ 3 ತಿಂಗಳಾದ ತಾಕುಗಳಿಗೆ ಚೆಕ್ ವಿತರಿಸುವುದು. ಬಹುವಾರ್ಷಿಕವಲ್ಲದ ಬೆಳೆಗಳಿಗೆ ಸಹಾಯಧನವನ್ನು ಒಂದೇ ಕಂತಿನಲ್ಲಿ, ನಾಟಿ ಮಾಡಿದ ಒಂದು ತಿಂಗಳ ನಂತರ ವಿತರಿಸುವುದು.
- ಪ್ರತಿ ಫಲಾನುಭವಿಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ಬೆಳೆಗಳನ್ನೊಳಗೊಂಡಂತೆ ಗರಿಷ್ಠ ಒಟ್ಟು 10 ಎಕರೆವರೆಗೆ ಸಹಾಯಧನ ನೀಡಬಹುದು.
- ಸಹಾಯಧನವನ್ನು ಹೊಸ ತೋಟಗಳಿಗೆ ಮಾತ್ರ ನೀಡಲಾಗುವುದು. ಹಳೇ ತೋಟಗಳು ಸಹಾಯಧನಕ್ಕೆ ಅರ್ಹವಿರುವುದಿಲ್ಲ.
- ಪ್ರದೇಶ ವಿಸ್ತರಣೆ ಕಾರ್ಯಕ್ರಮವನ್ನು ಸಂಸ್ಕರಣಾ ಘಟಕಗಳು ಅಥವಾ ಮರು ಖರೀದಿ ಒಪ್ಪಂದ ಸಂಸ್ಥೆಯ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ಗೊಂಚಲು ಮಾದರಿಯಲ್ಲಿ ಅನುಷ್ಠಾನಗೊಳಿಸಬೇಕು. ಇಲಾಖಾ ಅಧಿಕಾರಿಗಳು ಮರು ಖರೀದಿ ಒಪ್ಪಂದ, ಸಂಬಂಧಪಟ್ಟ ಕಂಪನಿಗಳ ಬಗೆಗಿನ ಮಾಹಿತಿ ಬಗ್ಗೆ ಮಾರ್ಗದರ್ಶನ ಮತ್ತು ಅರಿವು ನೀಡುವುದು.
- ಈ ಬೆಳೆಗಳನ್ನು ಹಾಲಿ ಇರುವ ತೋಟಗಾರಿಕೆ / ಕೃಷಿ ಬೆಳೆಗಳ ಮಧ್ಯದಲ್ಲಿ (ತಾಂತ್ರಿಕವಾಗಿ ಶಿಫಾರಸ್ಸಾಗಿದ್ದಲ್ಲಿ), ಅಂತರ ಬೆಳೆ/ ಮಿಶ್ರ ಬೆಳೆಯಾಗಿ ಬೆಳೆಸಬಹುದಾಗಿದೆ.
- ಶುದ್ಧ ಬೆಳೆ ಅಥವಾ ಅಂತರ್ / ಮಿಶ್ರ ಬೆಳೆ ಘಟಕಗಳಲ್ಲಿ, ವಿಸ್ತೀರ್ಣವನ್ನು ಲೆಕ್ಕಕ್ಕೆ ಪರಿಗಣಿಸುವಾಗ, ಶಿಫಾರಸ್ಸಿನಂತೆ ಕನಿಷ್ಟ ಪ್ರಮಾಣದ ಗಿಡಗಳ ಸಂಖ್ಯೆ ಇರುವುದನ್ನು ದೃಢೀಕರಿಸಿಕೊಳ್ಳುವುದು. ಶಿಫಾರಸ್ಸಿನಂತೆ ಬೆಳೆಯ ಅಂತರ ಇಲ್ಲದಿದ್ದಲ್ಲಿ, ಗಿಡಗಳ ಸಂಖ್ಯೆಯನ್ನು ಅಂದಾಜಿಸಿ, ವಿಸ್ತೀರ್ಣವನ್ನು ನಿರ್ಧರಿಸುವುದು.
- ಸಾವಯವ ಕೃಷಿ ಪದ್ಧತಿಯಿಂದ ಬೆಳೆದ ಫಲಾನುಭವಿಗಳಿಗೆ ಹೆಚ್ಚಿನ ಆದ್ಯತೆ ಮತ್ತು ಉತ್ತೇಜನ ನೀಡುವುದು.

- ಫಲಾನುಭವಿಯು ತನ್ನ ತಾಕಿನಲ್ಲಿ ತಾನೇ ಅರ್ಹ ಮೂಲಗಳಿಂದ ಸಸ್ಯ ಸಾಮಗ್ರಿಗಳನ್ನು ತಂದು ಬೆಳೆಸಿರಬೇಕು. ಕೆಲವೊಂದು ಅನಿವಾರ್ಯ ಸನ್ನಿವೇಶಗಳಲ್ಲಿ, ತೋಟಗಾರಿಕೆ ಇಲಾಖೆಯು ಇಂತಹ ಸಸ್ಯ ಸಾಮಗ್ರಿಗಳನ್ನು ಅರ್ಹ ಮೂಲಗಳಿಂದ ದೊರಕಿಸಿ ಕೊಡುವ ಪರ್ಯಾಯ ಕ್ರಮವೂ ಸಹ ಇರಬಹುದಾಗಿದೆ.
- ಶಾಲಾ ಕಾಲೇಜು ಹಾಗೂ ಇತರೆ ಸರ್ಕಾರಿ ಮೂಲದ ಸಂಘ ಸಂಸ್ಥೆಗಳ ಆವರಣದಲ್ಲಿ ಈ ಬೆಳೆಗಳನ್ನು ಅಭಿವೃದ್ಧಿಪಡಿಸಲು ಅವಶ್ಯವಿರುವ ಗಿಡಗಳನ್ನು ಇಲಾಖಾ ಮೂಲದಿಂದ ನೀಡುವುದು.
- ಪ್ರತಿ ಫಲಾನುಭವಿಗೆ ಪ್ರತಿ ಜಾತಿಯ ಸುಗಂಧ ಮತ್ತು ಔಷಧಿ ಬೆಳೆಗಳಿಗೆ ಅದೇ ಪ್ರದೇಶದಲ್ಲಿ ಪುನರಾವರ್ತಿತವಾಗಿ ಸಹಾಯಧನ ನೀಡಲಾಗುವುದಿಲ್ಲ. ಒಂದು ಬಾರಿ ಮಾತ್ರ ಸಹಾಯಧನವನ್ನು ನೀಡುವುದು.
- ರೈತರು ಬೆಳೆದ ಔಷಧಿ ಮತ್ತು ಸುಗಂಧ ಬೆಳೆಗಳ ಫಸಲಿನ ಮಾರಾಟದ ಹೊಣೆ/ ಜವಾಬ್ದಾರಿಯನ್ನು ತೋಟಗಾರಿಕೆ ಇಲಾಖೆಯು ಯಾವುದೇ ಸಂದರ್ಭದಲ್ಲಿ ವಹಿಸಿಕೊಳ್ಳುವುದಿಲ್ಲ. ರೈತರೇ ಸ್ವತ: ಮಾರಾಟ ಮೂಲಗಳನ್ನು ಕಂಡುಕೊಳ್ಳಬೇಕು. ಇದಕ್ಕಾಗಿ ಅವರು Buy-Back ವ್ಯವಸ್ಥೆ ಮಾಡಿಕೊಳ್ಳುವುದು ಅವಶ್ಯಕ.
- ಅರ್ಜಿ ನಮೂನೆ, ಸಹಾಯಧನ ವಿತರಣಾ ವಿಧಾನವನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮಾದರಿಯಲ್ಲಿ ನಿರ್ವಹಿಸುವುದು.

## 3. ಶ್ರೀಗಂಧ ಬೆಳೆ

### ಮಿಶ್ರ ತೋಟದಲ್ಲಿ ಶ್ರೀಗಂಧ ಬೆಳೆ

ಶ್ರೀಗಂಧ ನಿಧಾನವಾಗಿ ಬೆಳೆಯುವ ಅರೆ ಪರಾವಲಂಬಿ ಮರವಾದುದರಿಂದ ಇದನ್ನು ಒಣ ತೋಟಗಾರಿಕೆ ಬೆಳೆಗಳಾದ ಮಾವು, ಹಲಸು, ಆಮ್ಲ ಮತ್ತು ಸಪೋಟ ಬೆಳೆಗಳ ಮಧ್ಯೆ ಮಿಶ್ರ ಬೆಳೆಯಾಗಿ ಬೆಳೆದಲ್ಲಿ ಸಸ್ಯ ವೈವಿಧ್ಯತೆಯನ್ನು ಕಾಪಾಡುವ ಜೊತೆಗೆ, ಗಿಡಗಳು ಬೆಳೆದಂತೆ ತೋಟದ ಮೌಲ್ಯ ಅಧಿಕವಾಗುವುದಲ್ಲದೆ 15-20 ವರ್ಷಗಳಲ್ಲಿ ಅತ್ಯಧಿಕ ಲಾಭಗಳಿಸುವ ಪರ್ಯಾಯ ಬೆಳೆ ಪದ್ಧತಿಯಾಗಿ ಮಾರ್ಪಾಡಾಗುತ್ತದೆ.

ಮಾವು ಅಥವಾ ಸಪೋಟ ಬೆಳೆಯನ್ನು ಮುಖ್ಯ ಬೆಳೆಯಾಗಿಯೂ ಅವುಗಳ ಮಧ್ಯದಲ್ಲಿ ಶ್ರೀಗಂಧ ಮತ್ತು ಆಮ್ಲ ಗಿಡಗಳನ್ನು ಮಿಶ್ರ ಬೆಳೆಯಾಗಿಯೂ ಬೆಳೆಯಬಹುದು. ಸಾಮಾನ್ಯವಾಗಿ ಮಾವು ಅಥವಾ ಸಪೋಟಾ ಸಸಿಗಳನ್ನು 10x10 ಮೀ. ಅಂತರದಲ್ಲಿ ನಾಟಿ ಮಾಡಲಾಗುತ್ತದೆ. ಹೀಗೆ ನಾಟಿ ಮಾಡಿದಾಗ ಪ್ರತಿ ಹೆಕ್ಟೇರ್ ಪ್ರದೇಶದಲ್ಲಿ 100 ಮಾವು ಅಥವಾ ಸಪೋಟ ಗಿಡಗಳನ್ನು ನೆಡಬಹುದು. ಇಂತಹ ತೋಟದಲ್ಲಿ ಶ್ರೀಗಂಧದ ಗಿಡಗಳನ್ನು 5 ಮೀ. ಅಂತರದಲ್ಲಿ ಪ್ರತಿ ಸಪೋಟ ಅಥವಾ ಮಾವಿನ ಮಧ್ಯದಲ್ಲಿ ನೆಡಬಹುದು. ಹೀಗೆ ನೆಟ್ಟಾಗ ಒಟ್ಟು 400 ಗಂಧದ ಗಿಡಗಳನ್ನು ನೆಡಬಹುದು. ಒಂದು ವೇಳೆ ಆಮ್ಲ ಗಿಡಗಳನ್ನೂ ಸಹ ಮಿಶ್ರ ಬೆಳೆಯಾಗಿ ನೆಡಲು ಇಚ್ಚಿಸಿದಲ್ಲಿ ನಾಲ್ಕು ಸಪೋಟ ಅಥವಾ ಮಾವಿನ ಗಿಡಗಳ ಮಧ್ಯದಲ್ಲಿ ಶ್ರೀಗಂಧ ಮತ್ತು ಆಮ್ಲವನ್ನು ಪರ್ಯಾಯವಾಗಿ (Alternative) ನೆಡಬಹುದು. ಹೀಗೆ ನೆಟ್ಟಾಗ ಪ್ರತಿ ಹೆಕ್ಟೇರ್ ಪ್ರದೇಶದಲ್ಲಿ 100 ಮಾವು/ ಸಪೋಟ ಮತ್ತು 350 ಶ್ರೀಗಂಧ ಹಾಗೂ 50 ಆಮ್ಲ ಗಿಡಗಳನ್ನು ನೆಡಬಹುದು. ವಿವಿಧ ಮಿಶ್ರ ಬೆಳೆಯ ಮಾದರಿಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

**ಮಾವು / ಸಪೋಟ ಮತ್ತು ಶ್ರೀಗಂಧದ ಮಿಶ್ರ ತೋಟದ ಮಾದರಿ**

| | | | | | | |
|---|---|---|---|---|---|---|
| M/S | g+h | M/S | g+h | M/S | g+h | M/S |
| g+h | g+h | g+h | g+h | g+h | g+h | g+h |
| M/S | g+h | M/S | g+h | M/S | g+h | M/S |
| M/S = ಮಾವು ಅಥವಾ ಸಪೋಟ | | | | g+h=ಶ್ರೀಗಂಧ ಮತ್ತು ಆಶ್ರಯ ಗಿಡಗಳು | | |

**ಮಾವು/ ಸಪೋಟ, ಶ್ರೀಗಂಧದ ಮತ್ತು ಆಮ್ಲ ಗಿಡಗಳ ಮಿಶ್ರ ತೋಟದ ಮಾದರಿ**

| | | | | | | |
|---|---|---|---|---|---|---|
| M/S | g+h | M/S | g+h | M/S | g+h | M/S |
| g+h | A | g+h | g+h | g+h | A | g+h |
| M/S | g+h | M/S | g+h | M/S | g+h | M/S |
| g+h | A | g+h | g+h | g+h | A | g+h |
| M/S | g+h | M/S | g+h | M/S | g+h | M/S |
| M/S =ಮಾವು ಅಥವಾ ಸಪೋಟ | | g+h= ಶ್ರೀಗಂಧ ಮತ್ತು ಆಶ್ರಯ ಗಿಡಗಳು | | | A= ಆಮ್ಲ ಗಿಡಗಳು | |

**ಆಶ್ರಯ ಗಿಡಗಳು**

ಶ್ರೀಗಂಧದ ಗಿಡಗಳು ಪರಾವಲಂಭಿ ಗಿಡಗಳಾದುದರಿಂದ ಆಶ್ರಯ ಗಿಡಗಳಿಲ್ಲದೇ ಒಂದು ವರ್ಷದವರೆವಿಗೆ ಬದುಕಬಲ್ಲದು. ಅಷ್ಟರಲ್ಲಿ 2 ರಿಂದ 2.5 ಅಡಿ ಅಂತರದಲ್ಲಿ ಒಂದು ಆಶ್ರಯ ಗಿಡವನ್ನು ಅಭಿವೃದ್ಧಿಪಡಿಸಬೇಕು. ಅಗಸೆ ಅಥವಾ ತಂಗಡಿ ಗಿಡಗಳನ್ನು ಆಶ್ರಯ ಗಿಡಗಳಾಗಿ ಬೆಳೆಯಬಹುದು ಅಥವಾ ಯಾವುದೇ ಕಾಡಿನ ಗಿಡ ಪಕ್ಕದಲ್ಲಿ ಬೆಳೆದಿದ್ದಲ್ಲಿ ಅಡ್ಡಿಯಿಲ್ಲ. 10-12 ವರ್ಷಗಳ ನಂತರ ಸಪೋಟ ಅಥವಾ ಮಾವಿನ ಮರಗಳೂ ಸಹ ಶ್ರೀಗಂಧಕ್ಕೆ ಅರೆ ಆಸರೆ ಗಿಡಗಳಾಗುತ್ತವೆ.

ಶ್ರೀಗಂಧವು ಯಾವುದೇ ಸೂಕ್ತ (ಆಸರೆ) ಬೆಳೆಯೊಂದಿಗೆ ಮಿಶ್ರಬೆಳೆಯಾಗಿ ಅಥವಾ ಶುದ್ಧ ಬೆಳೆಯಾಗಿ (ಸ್ವಾಭಾವಿಕ ಕಾಡು ಮರಗಳು ಆಸರೆ ಬೆಳೆಯಾಗಿ) ಸಾಗುವಳಿ ಮಾಡಲ್ಪಟ್ಟಿದ್ದಲ್ಲಿ, ಸರಾಸರಿ ಅಂತರವನ್ನು 5x5 ಮೀ. ಆಗಿ ಪರಿಗಣಿಸಲಾಗಿರುತ್ತದೆ. ಅಂದರೆ ಎಕರೆಗೆ 160 ಅಥವಾ ಹೆಕ್ಟೇರಿಗೆ 400 ಸಂಖ್ಯೆಯ ಗಿಡಗಳನ್ನು ನಾಟಿ ಮಾಡಬಹುದಾಗಿರುತ್ತದೆ. ತಾಕುಗಳನ್ನು ಸಹಾಯಧನಕ್ಕೆ ಪರಿಗಣಿಸುವಾಗ ಗಿಡಗಳ ಸಂಖ್ಯೆಯನ್ನು ಎಣಿಸಿ, ವಿಸ್ತೀರ್ಣವನ್ನು ಲೆಕ್ಕ ಹಾಕುವುದು. ಶ್ರೀಗಂಧ ಸಸಿಗಳು ಸಹಾಯಧನ ವಿತರಣಾ ಸಂದರ್ಭದಲ್ಲಿ ಕನಿಷ್ಠ 1 ಅಡಿ ಎತ್ತರ ಕಡ್ಡಾಯವಾಗಿರಬೇಕು. ಒಂದು ವರ್ಷದಿಂದೀಚೆಗೆ (ಅಂದರೆ ಮೇ–2008 ರ ನಂತರ) ನಾಟಿ ಮಾಡಿದ ತಾಕುಗಳನ್ನು ಮಾತ್ರ. ಸಹಾಯಧನಕ್ಕೆ ಪರಿಗಣಿಸುವುದು. ಸಹಾಯಧನ ವಿತರಿಸುವ ಸಂದರ್ಭದಲ್ಲಿ ನಾಟಿ ಮಾಡಿ ಕನಿಷ್ಠ 3 ತಿಂಗಳಾದ ತಾಕುಗಳಿಗೆ ಚೆಕ್ ವಿತರಿಸುವುದು.

ಶ್ರೀಗಂಧ ಬೆಳೆಗೆ ಒಟ್ಟು ಸಹಾಯಧನ ವೆಚ್ಚದ ಶೇ.50 ರಷ್ಟನ್ನು ಮೊದಲ ವರ್ಷದಲ್ಲಿ, ಶೇ.20 ರಷ್ಟಮ್ಮಿ ಎರಡನೇ ವರ್ಷದಲ್ಲಿ ಹಾಗೂ ಉಳಿಕೆ ಶೇ.30 ರಷ್ಟನ್ನು ಮೂರನೇ ವರ್ಷದಲ್ಲಿ ನೀಡುವುದು.

## 4. ಸಹಾಯಧನ ಪಡೆಯುವ ವಿಧಾನ

- ➢ ಸೂಚಿತ ಬೆಳೆ ಇಟ್ಟಿರುವ ರೈತರು ತಾಲ್ಲೂಕಿನ ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಸಹಾಯಧನಕ್ಕಾಗಿ ಎಲ್ಲಾ ವಿವರಗಳೊಂದಿಗೆ ಅರ್ಜಿ ಸಲ್ಲಿಸುವುದು.
- ➢ ತಾಲ್ಲೂಕು ಅಧಿಕಾರಿಗಳು/ ತಾಂತ್ರಿಕ ತಂಡವು ಅರ್ಜಿ ಸಲ್ಲಿಸಿದ ರೈತರ ತಾಕುಗಳನ್ನು ಪರಿಶೀಲಿಸಿ ವಾಸ್ತವಿಕ ವಿವರಗಳನ್ನು ದೃಢೀಕರಿಸುವುದು.
- ➢ ಮಾರ್ಗಸೂಚಿಗನುಸಾರವಾಗಿ, ಮಂಜೂರಾತಿ ನೀಡುವುದು ಹಾಗೂ ಸಹಾಯಧನವನ್ನು ಫಲಾನುಭವಿಯ ಹೆಸರಿಗೆ ತೆಗೆದ ಚೆಕ್ ಮೂಲಕ ವಿತರಿಸುವುದು.
- ➢ ಇತರೆ ಯೋಜನೆಗಳಡಿಯಲ್ಲಿ ಫಲಾನುಭವಿಯು ಇದೇ ಬೆಳೆಗಳಿಗೆ ಅದೇ ಜಮೀನಿನಲ್ಲಿ ಸಹಾಯಧನ ಪಡೆದಿದ್ದರೆ, ಅವರು ಈ ಸಹಾಯಧನಕ್ಕೆ ಅರ್ಹರಲ್ಲ. ಸೂಚಿತ ಬೆಳೆಗಳಿಗೆ ಔಷಧಿ ಬೆಳೆಗಳ ಮಿಷನ್ ಅಡಿಯಲ್ಲಿ ಸಹಾಯಧನ ಪಡೆದ ನಂತರ ಇತರೆ ಮೂಲಗಳಿಂದ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸುವಂತಿಲ್ಲ.
- ➢ ಸಹಾಯಧನ ಪಡೆದ ರೈತರು ಸಹಾಯಧನದ ವಿವರಗಳುಳ್ಳ ನಾಮ ಫಲಕವನ್ನು ತಾಕಿನ ಮುಂಭಾಗದಲ್ಲಿ ಹಾಕುವುದು.

# ಅಧ್ಯಾಯ–5

## ಕೊಯ್ಲೋತ್ತರ, ಸಂಸ್ಕರಣಾ ಮತ್ತು ಮಾರುಕಟ್ಟೆ ಚಟುವಟಿಕೆಗಳಿಗೆ ಉತ್ತೇಜನ

ಸಧ್ಯ ಬಳಕೆಯಾಗುತ್ತಿರುವ ಕಚ್ಚಾ ಸಾಮಗ್ರಿಯ ಶೇ.30 ರಷ್ಟು ಪ್ರಮಾಣ, ಕಳಪೆ ಗುಣಮಟ್ಟದ ಕಾರಣದಿಂದ ತಯಾರಿಕಾ ಘಟಕಗಳ ಹಂತದಲ್ಲಿ ತಿರಸ್ಕರಿಸಲ್ಪಡುತ್ತಿದೆ. ಆದ್ದರಿಂದ, ಔಷಧಿ ಬೆಳೆಗಳ ಸಾಗುವಳಿಯೊಂದಿಗೆ, ಒಣಗಿಸುವ ಸೌಕರ್ಯ, ಶ್ರೇಣಿಗೊಳಿಸುವ ಸೌಕರ್ಯ, ಗೋದಾಮು, ಸಂಗ್ರಹಣೆ ಮತ್ತು ಶೇಖರಣೆ, ಉತ್ಪಾದನೆಯ ಸಾಗಾಣಿಕೆಗೆ ಸಾರಿಗೆ ಸೌಕರ್ಯ ಇತ್ಯಾದಿಗಳನ್ನು ಸಹ ಉತ್ತೇಜಿಸುವ ಅವಶ್ಯಕತೆಯಿರುತ್ತದೆ. ಇದರಿಂದ ನಷ್ಟವನ್ನು ಕಡಿಮೆ ಮಾಡುವುದು, ಸಂಸ್ಕರಣೆಯ ಮೂಲಕ ಉತ್ಪಾದನೆಯ ಮೌಲ್ಯ ವೃದ್ಧಿಗೊಳಿಸುವುದು ಮತ್ತು ಮಾರುಕಟ್ಟೆ ಸೌಲಭ್ಯ ಒದಗಿಸುವುದರ ಮೂಲಕ ಲಾಭಾಂಶವನ್ನು ವೃದ್ಧಿಸಲು ಅವಕಾಶವಾಗುತ್ತದೆ. APEDA ಸಂಸ್ಥೆಯವತಿಯಿಂದ ಈಗಾಗಲೇ ಕೇರಳ ಮತ್ತು ಉತ್ತರಾಂಚಲ ರಾಜ್ಯಗಳಲ್ಲಿ **ಕೃಷಿ ರಫ್ತು ವಲಯ (Agri Export Zones)** ಗಳನ್ನು ಸ್ಥಾಪಿಸಲಾಗಿರುತ್ತದೆ. ಔಷಧಿ ಬೆಳೆಗಳ ಮೇಲಿನ ಈ ರಫ್ತುವಲಯ ಅನುಷ್ಠಾನದಿಂದ ಪಡೆದ ಅನುಭವನ್ನು ಉಪಯೋಗಿಸಿಕೊಂಡು, ಯೋಜನೆಯಡಿ, ದೇಶದ ವಿವಿಧ ಭಾಗಗಳಲ್ಲಿ ಗುರುತಿಸಲ್ಪಟ್ಟ, ಮಾರುಕಟ್ಟೆ ಕೇಂದ್ರಗಳಿಗೆ ಸಾನಿಧ್ಯದಲ್ಲಿರುವ, ಔಷಧಿ ಬೆಳೆಗಳ ಗೊಂಚಲು ವಲಯಗಳಲ್ಲಿ, ಕೊಯ್ಲೋತ್ತರ, ಸಂಸ್ಕರಣೆಯಂತಹ ಮೌಲ್ಯವರ್ಧನಾ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸಲಾಗುವುದು. ಹಿಂದಿನಿಂದಲೂ ಸಾಂಪ್ರದಾಯಿಕವಾಗಿ ಔಷಧಿ ಬೆಳೆಗಳನ್ನು ಬೆಳೆಯುತ್ತಿರುವ ಪ್ರದೇಶಗಳು, ಸಂಶೋಧನಾ ಸಂಸ್ಥೆಗಳು ಮತ್ತು ಕೃಷಿ ವಿಶ್ವವಿದ್ಯಾನಿಲಯಗಳು ಕಾರ್ಯನಿರ್ವಹಿಸುತ್ತಿರುವ ಪ್ರದೇಶಗಳಲ್ಲಿ ಸಹ ಇದೇ ತರಹದ ಸೌಕರ್ಯವನ್ನು ಕಲ್ಪಿಸಲು ಉದ್ದೇಶಿಸಲಾಗಿರುತ್ತದೆ. APEDA ಸಂಸ್ಥೆಯ, ಕೃಷಿ ರಫ್ತುವಲಯಗಳಲ್ಲಿ, ಔಷಧಿ ಬೆಳೆಗಳ ರಫ್ತಿಗೆ ಒತ್ತು ನೀಡಲಾಗಿದ್ದು, ಔಷಧಿ ಬೆಳೆಗಳ ಮಿಷನ್ ಅಡಿ, ಸಾಗುವಳಿ ಮತ್ತು ಇತರೆ ಮೂಲಗಳಿಂದ ಸಂಗ್ರಹಿಸಲಾದ ಔಷಧಿ ಕಚ್ಚಾ ಸಾಮಗ್ರಿಗಳ ಮೌಲ್ಯವೃದ್ಧಿಸುವುದರ ಮೂಲಕ, AYUSH ಕ್ಷೇತ್ರದ ಕಚ್ಚಾ ಸಾಮಗ್ರಿಗಿರುವ ಬಾರಿ ಬೇಡಿಕೆಯನ್ನು ಪೂರೈಸುವ ಉದ್ದೇಶ ಹೊಂದಲಾಗಿದೆ. ಔಷಧಿ ಬೆಳೆಗಳ ರಫ್ತಿಗೆ ಸಂಬಂಧಪಟ್ಟಂತೆ, ರಫ್ತು ಮಾರುಕಟ್ಟೆಯನ್ನು ವಿವರವಾಗಿ ಅಭ್ಯಸಿಸಿ, ಬೇಡಿಕೆಯನ್ನಾಧರಿಸಿ ಪ್ರಭೇದಗಳನ್ನು ಆಯ್ಕೆಮಾಡುವುದು ಸೂಕ್ತ. ಕೊಯ್ಲೋತ್ತರ, ಸಂಸ್ಕರಣೆ ಮತ್ತು ಮಾರುಕಟ್ಟೆ ಘಟಕಗಳಿಗೆ ಸಂಬಂಧಪಟ್ಟಂತೆ, ಕಲ್ಪಿಸಬಹುದಾದ ಮೂಲಭೂತ ಸೌಕರ್ಯಗಳ ವಿವರ ಮತ್ತು ಸಹಾಯಧನದ ವಿವರಗಳು ಈ ಕೆಳಗಿನಂತಿವೆ;

**ಒಣಗಿಸುವ ಘಟಕಗಳು:** ಔಷಧಿ ಬೆಳೆಗಳ ಉತ್ಪಾದನೆಯನ್ನು ಸ್ವಚ್ಛವಾಗಿ ಒಣಗಿಸುವುದು, ಇದರ ಮೂಲ ಉದ್ದೇಶ. ಇದರ ಜೊತೆಗೆ ಸ್ವಚ್ಛತೆ, ಶ್ರೇಣಿಗೊಳಿಸುವ ಚಟುವಟಿಕೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದರಿಂದ, ಉತ್ಪಾದನೆಯು ಕೆಡದಂತೆ ಬಹಳ ಕಾಲ ಶೇಖರಿಸಿಡುವುದರ ಜೊತೆಗೆ, ಮಾರುಕಟ್ಟೆ ಬೇಡಿಕೆಯನ್ನು ಸುಧಾರಿಸಬಹುದು. ಗುಣಮಟ್ಟ ಕಾಪಾಡಲು ಗಿಡ ಮೂಲಿಕೆಗಳನ್ನು ನೆರಳಿನಡಿ ಒಣಗಿಸಬೇಕಾಗುವುದರಿಂದ, ನೆರಳು ಪರದೆ ಹೊಂದಿದ ಒಣಗಿಸುವ ಘಟಕಗಳು ಅಥವಾ ಕಡಿಮೆ ಉಷ್ಣಾಂಶ ಒಣಗಿಸುವ ಘಟಕಗಳನ್ನು ಅಭಿವೃದ್ಧಿಪಡಿಸುವುದು.

1. **ಶೇಖರಣಾ ಗೋದಾಮುಗಳು:** ಶೇಖರಣಾ ಗೋದಾಮುಗಳು ಒಣಗಿಸುವ ಘಟಕ ಮತ್ತು ಸಂಸ್ಕರಣಾ ಘಟಕಗಳ ನಡುವಿನ ಕೊಂಡಿಗಳಂತೆ ಕಾರ್ಯನಿರ್ವಹಿಸುತ್ತವೆ. ಒಣಗಿಸುವ ಘಟಕಗಳಿಂದ, ಒಣಗಿದ ಗಿಡ ಮೂಲಿಕೆಗಳನ್ನು ಸಂಗ್ರಹಿಸಿ, ಗೋದಾಮುಗಳಲ್ಲಿ ಶೇಖರಿಸಿಡಬೇಕಾಗುವುದರಿಂದ, ಗೋದಾಮುಗಳಲ್ಲಿ ಸಾಕಷ್ಟು ಗಾಳಿಯಾಡಲು ವ್ಯವಸ್ಥೆ ಇರಬೇಕು. ಇವುಗಳು ಔಷಧಿ ಬೆಳೆ ಸಾಗುವಳಿಯಾಗುವ ಗೊಂಚಲು ತಾಕುಗಳಿಗೆ ಸಮೀಪದಲ್ಲಿ ಹಾಗೂ ಸಂಸ್ಕರಣಾ / ಮಾರುಕಟ್ಟೆ ಕೇಂದ್ರಗಳಿಗೆ ಸಾನಿದ್ಯದಲ್ಲಿ ಕೇಂದ್ರೀಕೃತವಾಗಿರಬೇಕು.

2. **ಸಂಸ್ಕರಣಾ ಘಟಕಗಳು:** ಪ್ರದೇಶದಲ್ಲಿ ಬೆಳೆಯಲಾಗುತ್ತಿರುವ ಔಷದಿ ಬೆಳೆಗಳನ್ನಾಧರಿಸಿ, ಗೊಂಚಲು ಪ್ರದೇಶದಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ / ಅಸ್ತಿತ್ವದಲ್ಲಿರುವ, ಉತ್ತಮ ರಸ್ತೆ/ ರೈಲು, ವಿದ್ಯುತ್ ಸೌಲಭ್ಯಗಳನ್ನು ಹೊಂದಿರುವ ಕೈಗಾರಿಕಾ ಪ್ರದೇಶಗಳಲ್ಲಿ, ಈ ಘಟಕಗಳನ್ನು ಅಭಿವೃದ್ಧಿಪಡಿಸುವುದು ಸಮಂಜಸವಾಗುತ್ತದೆ.
3. **ಗುಣಮಟ್ಟ ಪರೀಕ್ಷೆ:** ಆಂತರಿಕ ಮತ್ತು ರಫ್ತು ಮಾರುಕಟ್ಟೆಗೆ, ಕಚ್ಚಾ ಸಾಮಗ್ರಿಗಳ (raw material) ಮತ್ತು ಮೌಲ್ಯ ವೃದ್ಧಿಸಿದ ಪದಾರ್ಥಗಳ ಗುಣಮಟ್ಟ ಪರೀಕ್ಷಿಸಿ, ದೃಢೀಕರಿಸಲು, ಪ್ರಮಾಣೀಕರಣ ಪ್ರಯೋಗಾಲಯಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆಯಿದೆ. ಯೋಜನೆಯಡಿ ಇಂತಹ ಹೊಸ ಪ್ರಯೋಗಾಲಯಗಳನ್ನು (ಅದರಲ್ಲೂ ಖಾಸಗಿ ಸಹಭಾಗಿತ್ವದಲ್ಲಿ) ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗಿದೆ.
4. **ಮಾರುಕಟ್ಟೆ:** ಯೋಜನೆಯಡಿ ಕೆಳಕಾಣಿಸಿದ ಮಾರುಕಟ್ಟೆಗೆ ಸಂಬಂಧಿಸಿದ ಮೂಲಭೂತ ಸೌಕರ್ಯಗಳಿಗೆ ಸಹಾಯಧನ ಕಲ್ಪಿಸಲಾಗುವುದು.
   - (a) ಔಷಧಿ ಬೆಳೆಗಳ ಮಾರುಕಟ್ಟೆಗೆ ಅನುವಾಗುವಂತೆ ಸಗಟು ಮಾರುಕಟ್ಟೆ ಮತ್ತು ಕೃಷಿ ಮಂಡಿಗಳ ಮೂಲಭೂತ ಸೌಕರ್ಯ ಬಲಪಡಿಸುವುದು.
   - (b) ಔಷಧಿ ಬೆಳೆಗಳ ಗೊಂಚಲು ಪ್ರದೇಶಗಳಲ್ಲಿ, ಸಸ್ಯ ಮೂಲಿಕೆಗಳ ಮಂಡಿಗಳನ್ನು ಅಭಿವೃದ್ಧಿಪಡಿಸುವುದು.
   - (c) ಬೆಳೆಗಾರರು, ಕೈಗಾರಿಕಾ ಘಟಕಗಳು ಮತ್ತು ವ್ಯಾಪಾರಿಗಳ ಮಧ್ಯೆ ಸಂಬಂಧ ಬಲಪಡಿಸುವುದು.
   - (d) ಔಷಧಿ ಬೆಳೆಗಳ ಸಾಗುವಳಿ, ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಮೌಲ್ಯವೃದ್ಧಿ, ಮಾರುಕಟ್ಟೆ ವ್ಯವಸ್ಥೆ, ಬೆಲೆ ಪರಿಸ್ಥಿತಿ ಇತ್ಯಾದಿಗಳ ಬಗ್ಗೆ ಮಾಹಿತಿ/ ತರಬೇತಿ / ಪ್ರಚಾರ ಒದಗಿಸುವುದು.

**ವಿವಿಧ ಮಾರುಕಟ್ಟೆ ಸಂಬಂಧಿತ ಘಟಕಗಳಿಗೆ ನೀಡಲಾಗುವ ಸಹಾಯಧನದ ವಿವರಗಳು ಈ ಕೆಳಗಿನಂತಿವೆ;**

**(a)** **ಮಾರುಕಟ್ಟೆ ಕುರಿತು ಪ್ರಚಾರ:** ಮಾರುಕಟ್ಟೆ ಸಂಬಂಧ ವ್ಯಾಪಾರ ಮೇಳ / ಪ್ರದರ್ಶನ/ ಮಾಧ್ಯಮಗಳ ಮೂಲಕ ಪ್ರಚಾರ / ಕಾರ್ಯಾಗಾರ / ವಿಚಾರ ಗೋಷ್ಠಿ/ ಪ್ರಚಾರ ಸಾಮಗ್ರಿಗಳ ತಯಾರಿ ಇತ್ಯಾದಿ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಚಟುವಟಿಕೆಗಳು ಯೋಜನಾ ಆಧಾರಿತವಾಗಿದ್ದು, ಪ್ರತಿ ಔಷಧಿ ಬೆಳೆಗಳ ಗೊಂಚಲಿಗೆ ಯೋಜನಾ ವೆಚ್ಚದ ಶೇ.50 ರಷ್ಟು, ಗರಿಷ್ಠ ರೂ.10.00 ಲಕ್ಷಗಳ ವರೆಗೆ ಸಹಾಯಧನ ಪಡೆದುಕೊಳ್ಳಬಹುದಾಗಿರುತ್ತದೆ.

**(b)** **Market Intelligence**: ಮಾರುಕಟ್ಟೆ ಸಂಬಂಧಿತ ಮಾಹಿತಿ ಸಂಗ್ರಹಣೆ, ಕ್ರೂಢೀಕರಣ ಮತ್ತು ಬೆಳೆಗಾರರಿಗೆ ಈ ಕುರಿತು ಪ್ರಚಾರ ಒದಗಿಸುವ ಹಾಗೂ Market Intelligence ಗೆ ಸಹಕಾರಿಯಾಗುವ ಇತರೆ ಯಾವುದೇ ಚಟುವಟಿಕೆಗಳಿಗೆ ಸಹಾಯಧನ ಒದಗಿಸಲಾಗುವುದು. ಇದು ಯೋಜನಾ ವರದಿ ಆಧಾರಿತ ಕಾರ್ಯಕ್ರಮವಾಗಿರುತ್ತದೆ.

**(c)** **ಮರು ಖರೀದಿ ಒಪ್ಪಂದ:** ಮರು ಖರೀದಿ ಒಪ್ಪಂದ ಚಟುವಟಿಕೆಗಳಾದಂತಹ ಮಾರಾಟಗಾರರು/ ಖರೀದಿಗಾರರ ಸಭೆ ಏರ್ಪಡಿಸುವುದು, ನವೀನ ಮಾದರಿಯ ಮಾರುಕಟ್ಟೆ ವ್ಯವಸ್ಥೆ, ಔಷಧಿ ಬೆಳೆಗಳ ಮಾರುಕಟ್ಟೆ ಪ್ರೋತ್ಸಾಯಿಸಲು ಗೊಂಚಲು ಗ್ರಾಮಗಳಲ್ಲಿ Revolving fund ವ್ಯವಸ್ಥೆ, ಸ್ವಸಹಾಯ ಗುಂಪುಗಳು, ಸಹಕಾರಿ ಸಂಘಗಳು, ಸೊಸೈಟಿಗಳು ಮತ್ತು ಉತ್ಪಾದಕರ ಕಂಪನಿ ಸ್ಥಾಪನೆಗೆ ಸಹಾಯಧನ ಒದಗಿಸಬಹುದಾಗಿರುತ್ತದೆ. ಮಾರುಕಟ್ಟೆ ಸಂಬಂಧಿತ ಇತರೆ ಯಾವುದೇ ಚಟುವಟಿಕೆಗಳನ್ನು ಬಲಪಡಿಸುವ ಹಾಗೂ ಮಾರಾಟಗಾರರು ಮತ್ತು ಖರೀದಿಗಾರರ ನಡುವಿನ ಸಂಬಂಧ ವೃದ್ಧಿಸುವ ಘಟಕಗಳನ್ನು ಕಾರ್ಯಕ್ರಮದಡಿ ಉತ್ತೇಜಿಸಲು, ಯೋಜನಾ ವರದಿ ಆಧಾರದ ಮೇಲೆ ಸಹಾಯಧನದ ಅವಕಾಶ ಕಲ್ಪಿಸಲಾಗುವುದು.

(d) **ಮೂಲಭೂತ ಸೌಕರ್ಯ:** ಗ್ರಾಮ ಮಟ್ಟದಲ್ಲಿ ಗಿಡಮೂಲಿಕೆಗಳ ವ್ಯಾಪಾರಕ್ಕಾಗಿ ಔಷಧಿ ಬೆಳೆಗಳ ಮಂಡಿ ಅಭಿವೃದ್ಧಿಗೆ ರೂ.10.00 ಲಕ್ಷದ ವರೆಗೆ ಸಹಾಯಧನ ಪಡೆಯಲು ಅವಕಾಶವಿರುತ್ತದೆ. ಗ್ರಾಮ ಮಟ್ಟದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ /ಕಾರ್ಯನಿರ್ವಹಿಸುತ್ತಿರುವ ಕೃಷಿ ವ್ಯಾಪಾರ ಮಂಡಿಗಳಲ್ಲಿ ಔಷಧಿ ಬೆಳೆಗಳ ವ್ಯಾಪಾರಕ್ಕಾಗಿ, ಹಾಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳ ನವೀಕರಣಕ್ಕಾಗಿ ಅಥವಾ ಹೊಸ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಸಹ ಸಹಾಯಧನ ಒದಗಿಸಬಹುದಾಗಿದೆ. ಅಂತೆಯೇ ಜಿಲ್ಲಾ ಮತ್ತು ರಾಜ್ಯಮಟ್ಟದ ಕೃಷಿ ವ್ಯಾಪಾರ ಮಂಡಿಗಳಲ್ಲಿಯೂ ಸಹ ಮೂಲಭೂತ ಸೌಕರ್ಯಗಳ ನವೀಕರಣಕ್ಕೆ ಮತ್ತು ಹೊಸ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಅವಕಾಶ ಕಲ್ಪಿಸಿಕೊಳ್ಳಬಹುದಾಗಿರುತ್ತದೆ. ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಗಿಡಮೂಲಿಕೆಗಳ ಹೊಸ ಮಂಡಿಗಳ ಸ್ಥಾಪನೆಗೆ ಸಹ ಸಹಾಯಧನ ಪಡೆಯಲು ಅವಕಾಶವಿರುತ್ತದೆ.

**ಕೊಯ್ಲೋತ್ತರ, ಸಂಸ್ಕರಣೆ ಮತ್ತು ಮೌಲ್ಯವರ್ಧನೆಗೆ ಸಂಬಂಧಪಟ್ಟ ತಾಂತ್ರಿಕ ವಿನ್ಯಾಸ, ತಾಂತ್ರಿಕ ಯೋಜನಾ ವರದಿಗಳನ್ನು ಸಂಬಂಧಪಟ್ಟ ಇಲಾಖೆಗಳಾದ ಕೈಗಾರಿಕಾ ಇಲಾಖೆ, ಸಣ್ಣ ಕೈಗಾರಿಕೆಗಳ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯದ ತೋಟಗಾರಿಕಾ / ಸಂಸ್ಕರಣಾ / ಇಂಜಿನಿಯರಿಂಗ್ ವಿಭಾಗದ ವಿಜ್ಞಾನಿಗಳು ಅಥವಾ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ/ ಐ.ಐ.ಹೆಚ್.ಆರ್ ನಂತಹ ಐ.ಸಿ.ಎ.ಆರ್ ಸಂಸ್ಥೆಗಳ ಅರ್ಹ ವಿಜ್ಞಾನಿಗಳಿಂದ ತಯಾರಿಸಿಕೊಳ್ಳುವುದು ಅಥವಾ ದೃಢೀಕರಿಸಿಕೊಳ್ಳುವುದು.**

**ಮಾರುಕಟ್ಟೆ ಸಂಬಂಧಿತ ವಿನ್ಯಾಸ, ತಾಂತ್ರಿಕ ಯೋಜನಾ ವರದಿಗಳನ್ನು ಸಂಬಂಧಪಟ್ಟ ಇಲಾಖೆಗಳಾದ ಎ.ಪಿ.ಎಂ.ಸಿ, ಕೃಷಿ ಮತ್ತು ಮಾರುಕಟ್ಟೆ ಇಲಾಖೆ, ಕೃಷಿ ವಿಶ್ವವಿದ್ಯಾನಿಲಯದ ಮಾರುಕಟ್ಟೆ ವಿಭಾಗ, ಐ.ಸಿ.ಎ.ಆರ್ ಅಧೀನದ ಅರ್ಹ ಇಲಾಖೆಗಳ ವತಿಯಿಂದ ತಯಾರಿಸಿಕೊಳ್ಳುವುದು ಅಥವಾ ದೃಢೀಕರಿಸಿಕೊಳ್ಳುವುದು.**

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿ ಅನುಸರಿಸಿದಂತೆಯೇ, ಈ ಘಟಕಗಳ ಅನುಷ್ಠಾನ ಸಂದರ್ಭದಲ್ಲಿ ಸಹ ಖರೀದಿಸಲಾದ ಉತ್ತಮ ಗುಣಮಟ್ಟದ ಪರಿಕರಗಳ ಬಿಲ್ಲು/ ರಸೀದಿಗಳನ್ನು ಫಲಾನುಭವಿಗಳಿಂದ ಪಡೆದು, ಪರಿಶೀಲಿಸಿ ದೃಢೀಕರಿಸುವುದು.

## 5. ಗುಣಮಟ್ಟ ಪರೀಕ್ಷೆ, ದೃಢೀಕರಣ ಮತ್ತು ವಿಮೆ

(a) **ಗುಣಮಟ್ಟ ಪರೀಕ್ಷೆ:** ಬೆಳೆಗಾರರು ಬೆಳೆದ ಔಷಧಿ ಬೆಳೆಗಳು ಮತ್ತು ಗಿಡಮೂಲಿಕೆಗಳಿಗೆ ಉತ್ತಮ ಬೆಲೆ ದೊರಕಿಸುವಲ್ಲಿ, ಗುಣಮಟ್ಟ ಪರೀಕ್ಷೆ ಪ್ರಮುಖ ಪಾತ್ರವನ್ನು ವಹಿಸುತ್ತದೆ. AYUSH ಮತ್ತು NABL ಅಧೀನದ ದೃಢೀಕೃತ ಸಂಸ್ಥೆಗಳಿಂದ ಗಿಡಮೂಲಿಕೆಗಳ ಗುಣಮಟ್ಟ ದೃಢೀಕರಿಸಲು, ಬೆಳೆಗಾರರಿಗೆ ಗುಣಮಟ್ಟ ಪರೀಕ್ಷೆಯ ಒಟ್ಟು ವೆಚ್ಚದ ಶೇ.50 ರಷ್ಟು, ಗರಿಷ್ಠ ರೂ.5000/–ಗಳ ವರೆಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಸಂಬಂಧ ಪರೀಕ್ಷಾ ಶುಲ್ಕಾ ವೆಚ್ಚದ ಬಿಲ್ಲು/ ರಸೀದಿಗಳನ್ನು ಸಂಬಂಧಪಟ್ಟ ಫಲಾನುಭವಿಗಳಿಂದ ಪಡೆದು, ನೈಜತೆಯನ್ನು ಪರಾಮರ್ಷಿಸಿ / ಪರಿವೀಕ್ಷಿಸಿ, ದೃಢೀಕರಿಸಿ, ಸಹಾಯಧನ ವಿತರಿಸುವುದು.

(b) **ದೃಢೀಕರಣ:** ಸಾವಯವ ಬೇಸಾಯ ಪದ್ಧತಿಯಿಂದ ಬೆಳೆದ ಔಷಧಿ ಬೆಳೆಗಳು ಮತ್ತು ಗಿಡಮೂಲಿಕೆಗಳ ಸಾವಯವ ದೃಢೀಕರಣ ಮತ್ತು GAP ಪ್ರಮಾಣೀಕರಣ ಪ್ರಕ್ರಿಯೆಗಳು, ಈ ಪದಾರ್ಥಗಳ ಗುಣಮಟ್ಟ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುವುದಲ್ಲದೇ, ಬೆಳೆಗಾರರಿಗೆ ಉತ್ತಮ ಬೆಲೆ ಮತ್ತು ಬಳಕೆದಾರರಿಗೆ ಉತ್ತಮ ಗುಣಮಟ್ಟದ ಗಿಡಮೂಲಿಕೆ ಔಷಧಿಗಳನ್ನು ಒದಗಿಸುವಲ್ಲಿ ಅನುವಾಗುತ್ತದೆ. ಯೋಜನಾವರಧಿಯನ್ನಾಧರಿಸಿ, 50 ಹೆಕ್ಟೇರ್ ಗಾತ್ರದ

ಬೆಳೆಗಾರರ ಗುಂಪುಗಳಿಗೆ ಗರಿಷ್ಠ ರೂ.50.00 ಲಕ್ಷಗಳ ವರೆಗೆ ಸಹಾಯಧನದ ಅವಕಾಶವಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿ ಈಗಾಗಲೇ ನೀಡಲಾಗಿರುವ ಮೂಲ ಮಾರ್ಗಸೂಚಿ ಮತ್ತು ಸಾವಯವ ದೃಢೀಕರಣಕ್ಕೆ ಸಂಬಂಧಪಟ್ಟಂತೆ, ತದನಂತರ ನಿರ್ದೇಶನಾಲಯದಿಂದ ನೀಡಲಾಗಿರುವ ಹೆಚ್ಚುವರಿ ಮಾರ್ಗಸೂಚಿಗಳು, ಔಷಧಿ ಬೆಳೆಗಳ ಸಾವಯವ ದೃಢೀಕರಣಕ್ಕೂ ಅನ್ವಯಿಸುತ್ತವೆ.

(c) **ಬೆಳೆ ವಿಮೆ:** ಔಷಧಿ ಬೆಳೆಗಳ ಸಾಗುವಳಿಯು ಕೃಷಿ ಕ್ಷೇತ್ರದಲ್ಲಿ ಹೊಸ ಚಟುವಟಿಕೆಯಾದ್ದರಿಂದ, ಬೆಳೆಗಾರರಿಗೆ ವಿಮೆ ಸೌಲಭ್ಯ ನೀಡುವ ಅವಶ್ಯಕತೆಯಿರುತ್ತದೆ. ಈ ಘಟಕದಡಿ ನಿಗಧಿಪಡಿಸಿದ ಬೆಳೆಯ ವಿಮಾ ಕಂತಿನ ಶೇ.50 ರಷ್ಟನ್ನು ಸಹಾಯಧನವಾಗಿ ನೀಡಲು ಅವಕಾಶವಿರುತ್ತದೆ. ಔಷಧಿ ಬೆಳೆಗಳ ವಿಮಾ ಕಂತು ಮತ್ತು ಯೋಜನೆಯ ವಿವರಗಳನ್ನು ಕೃಷಿ ವಿಮಾ ನಿಗಮದೊಂದಿಗೆ ಪರಾಮರ್ಶಿಸಿ ನಂತರ ಒದಗಿಸಲಾಗುವುದು.

## 6. ಯೋಜನಾ ವರದಿ

ಔಷಧಿ ಬೆಳೆಗಳಿಗೆ ಸಂಬಂಧಪಟ್ಟಂತೆ AYUSH ಹಾಗೂ ಇತರೆ ಇಲಾಖೆಗಳ ಯೋಜನೆಗಳ ನಡುವೆ ಸಮನ್ವಯ ಸಾಧಿಸಲು, ಆಯ್ದ ಗೊಂಚಲು ಪ್ರದೇಶಗಳಲ್ಲಿ ವಿವರವಾದ ಯೋಜನಾ ವರದಿ/ ವಹಿವಾಟು ಯೋಜನೆಗಳನ್ನು, ಕ್ಷೇತ್ರದಲ್ಲಿ ಕಾರ್ಯ ಕ್ಷಮತೆಯುಳ್ಳ ದಕ್ಷ ಸಲಹಾ ಮಂಡಳಿಗಳ ವತಿಯಿಂದ ತಯಾರಿಸುವುದು. ರಾಜ್ಯಮಟ್ಟದಲ್ಲಿ ಮಿಷನ್ ಏಜೆನ್ಸಿಗೆ ಯೋಜನಾ ನಿರ್ವಹಣಾ ಸಲಹೆಗಾರರ ನೇಮಕಾತಿಗೆ ಅವಕಾಶ ಕಲ್ಪಿಸಲಾಗಿದ್ದು, ಯೋಜನಾ / ವಹಿವಾಟು ವರದಿ ತಯಾರಿ, ಅನುಷ್ಠಾನ ವಿಧಾನ ಇತ್ಯಾದಿ ಸಲಹೆಗಳನ್ನು ನೀಡುವ ಜವಾಬ್ದಾರಿಯನ್ನು ಸದರಿಯವರಿಗೆ ವಹಿಸಬಹುದಾಗಿರುತ್ತದೆ. ಕೊಯ್ಲೋತ್ತರ ಮೂಲಭೂತ ಸೌಕರ್ಯಗಳಾದ ಪ್ಯಾಕಿಂಗ್ ಮತ್ತು ಒಣಗಿಸುವ ಘಟಕಗಳು, ಸಂಸ್ಕರಣಾ ಘಟಕಗಳು, ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳನ್ನು ಆಯ್ಕೆ ಮಾಡಲಾದ ಗೊಂಚಲು ಪ್ರದೇಶಗಳಲ್ಲದೇ, ಈ ಸೌಲಭ್ಯಗಳು ಮತ್ತು ಸಾಗುವಳಿ ಗೊಂಚಲುಗಳ ಮಧ್ಯೆ ಸೂಕ್ತ ಸಂಪರ್ಕ ಏರ್ಪಡಿಸಿದಲ್ಲಿ, ಗೊಂಚಲುಗಳ ಹೊರಗಡೆಯು ಕಲ್ಪಿಸಬಹುದಾಗಿರುತ್ತದೆ. ಯೋಜನಾ ವರದಿಗಳನ್ನು ಸೂಕ್ತ ವ್ಯವಹಾರ ಯೋಜನೆ ಉದ್ಯಮ ಶೀಲತೆಯನ್ನಾಧರಿಸಿ ತಯಾರಿಸಬೇಕು.

# ಅಧ್ಯಾಯ-6

## ಸಹಾಯಧನ – ಅರ್ಹತೆ, ಸ್ವರೂಪ/ ಪ್ರಮಾಣ, ಘಟಕವಾರು ಸಹಾಯಧನದ ವಿವರಗಳು

**1. ಅರ್ಹತೆ:**

- **ಪ್ರದೇಶ ವಿಸ್ತರಣೆ ಮತ್ತು ನರ್ಸರಿ ಅಭಿವೃದ್ಧಿಗೆ:** ಬೆಳೆಗಾರರು, ಬೆಳೆಗಾರರ ಸಂಘಟನೆಗಳು/ಸಹಕಾರಿ ಸಂಘಗಳು/ ಸಂಸ್ಥೆಗಳು, ಸ್ವಸಹಾಯ ಗುಂಪುಗಳು.
- **ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ ಮತ್ತು ಮಾರುಕಟ್ಟೆ ಚಟುವಟಿಕೆಗಳು:**

(a) ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳು.

(b) ಸಂಘಟನೆಗಳು / ಸಹಕಾರಿ ಸಂಘಗಳು/ ಸಂಸ್ಥೆಗಳು.

(c) ಸಂಶೋಧನೆ ಮತ್ತು ಅಭಿವೃದ್ಧಿ ಘಟಕವನ್ನೊಳಗೊಂಡ, ಅಧಿಕೃತ ಪ್ರಾಧಿಕಾರದಿಂದ ಗುರುತಿಸಲ್ಪಟ್ಟ, ಕನಿಷ್ಠ 3 ವರ್ಷ ಅನುಭವ ಹೊಂದಿರುವ, ನೊಂದಾಯಿತ ಕೈಗಾರಿಕಾ ಘಟಕಗಳು.

(d) ಉದ್ಯಮಶೀಲ ಮತ್ತು ಕೈಗಾರಿಕಾ ಘಟಕಗಳು.

(e) NABL ದೃಢೀಕೃತ ಪ್ರಯೋಗಾಲಯಗಳು.

(f) ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳು ಹಾಗೂ ವಿಶ್ವವಿದ್ಯಾನಿಲಯಗಳು.

### 2. ಸಹಾಯಧನದ ಸ್ವರೂಪ ಮತ್ತು ಪ್ರಮಾಣ

### 2.A ಪ್ರದೇಶ ವಿಸ್ತರಣೆ

ಯೋಜನೆಯಡಿ ಸಹಾಯಧನಕ್ಕೆ ಬೆಳೆಗಳನ್ನು, ಆಂತರಿಕ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೇಡಿಕೆ, ಅರಣ್ಯ ಪ್ರದೇಶದಲ್ಲಿ ಅವುಗಳ ಲಭ್ಯತೆ ಮತ್ತು ಪ್ರಮಾಣ, ಪ್ರಭೇದಗಳ ಸಂರಕ್ಷಣಾ ಸ್ಥಿತಿ-ಗತಿ (ಸೂಕ್ಷ್ಮ ಮತ್ತು ಭೇದ್ಯಿತ, ಅಳಿವಿನಂಚಿನಡೆಗೆ ಸಾಗಬಹುದಾದ, ಅಳಿವಿನಂಚಿನಲ್ಲಿರುವ, ತೀರಾ ವಿನಾಶದ ಅಂಚಿನಲ್ಲಿರುವ) ಗಳನ್ನಾಧರಿಸಿ ಆಯ್ಕೆಮಾಡಲಾಗಿದೆ. ಅಲ್ಲದೇ ವಾರ್ಷಿಕ / ದ್ವೈವಾರ್ಷಿಕ ಬೆಳೆಗಳಿಗೆ ಮತ್ತು ಫಸಲು ನೀಡಲು ಹೆಚ್ಚು ಅವಧಿ ತೆಗೆದುಕೊಳ್ಳುವ ಬಹುವಾರ್ಷಿಕ ಬೆಳೆಗಳಿಗೆ ಸಹಾಯಧನದ ಪ್ರಮಾಣದಲ್ಲಿ ವ್ಯತ್ಯಾಸವಾಗುತ್ತದೆ. ಫಸಲು ಬಿಡಲು ಹೆಚ್ಚು ಸಮಯ ತೆಗೆದುಕೊಳ್ಳುವ ಬೆಳೆಗಳಾದ; ಅಶೋಕ, ಅರ್ಜುನ, ಬೇಲ, ನೆಲ್ಲಿ, ಗುಗ್ಗುಳ, ನಾಗಕೇಸರ ಇತ್ಯಾದಿ ಬೆಳೆಗಳಿಗೆ ಪ್ರಥಮ ವರ್ಷದಿಂದಲೇ ಸಹಾಯಧನ ನೀಡಬೇಕಾಗುತ್ತದೆ.

- ತೀರಾ ಅಳಿವಿನಂಚಿನಲ್ಲಿರುವ / ರಫ್ತು ನಿಷೇಧಿಸಲ್ಪಟ್ಟಿರುವ, ವನ್ಯಜೀವಿ ಸಂರಕ್ಷಣಾ ಕಾಯ್ದೆ (ಶೆಡ್ಯೂಲ್-VI, CITES ಪಟ್ಟಿ) ಯಡಿ ಪಟ್ಟಿ ಮಾಡಲಾಗಿರುವ ಪ್ರಭೇದಗಳಿಗೆ ಸಾಗುವಳಿ ವೆಚ್ಚದ ಶೇ.75 ರಷ್ಟು ಸಹಾಯಧನ ಒದಗಿಸಲಾಗುವುದು.
- ಅವೈಜ್ಞಾನಿಕ ಸಂಗ್ರಹಣಾ ಪದ್ಧತಿಯ ಪರಿಣಾಮವಾಗಿ, ಅರಣ್ಯ ಮೂಲಗಳಿಂದ ಸಂಗ್ರಹಣೆ ಕಡಿಮೆಯಾಗುತ್ತಿದ್ದು, ಅಳಿವಿನೆಡೆಗೆ ಸಾಗುತ್ತಿರುವ ಮತ್ತು ಫಸಲು ಬಿಡಲು ಹೆಚ್ಚು ಕಾಲ ತೆಗೆದುಕೊಳ್ಳುವ ಬೆಳೆಗಳಿಗೆ ಸಾಗುವಳಿ ವೆಚ್ಚದ ಶೇ.50 ರಷ್ಟು ಸಹಾಯಧನ ಒದಗಿಸಲಾಗುವುದು.
- ಔಷಧಿ ಕ್ಷೇತ್ರದಿಂದ ಬೇಡಿಕೆಯಲ್ಲಿರುವ ಉಳಿದ ಬೆಳೆಗಳಿಗೆ ಸಾಗುವಳಿ ವೆಚ್ಚದ ಶೇ.20 ರಷ್ಟು ಸಹಾಯಧನ ಒದಗಿಸಲಾಗುವುದು.

ಮೇಲ್ಕಾಣಿಸಿದ 3 ಸಹಾಯಧನ ವಿಭಾಗಗಳಡಿ ನೀಡಲಾಗಿರುವ ಬೆಳೆಗಳ ಪಟ್ಟಿಗೆ ಬೇಡಿಕೆ ಮತ್ತು ಪ್ರಾಮುಖ್ಯತೆಯನ್ನಾಧರಿಸಿ, ಹೊಸ ಬೆಳೆಗಳನ್ನು ಸಹ ಭಾರತ ಸರ್ಕಾರದ ಅನುಮತಿಯೊಂದಿಗೆ ಸೇರಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ನರ್ಸರಿ ಮತ್ತು ಹೊಸ ತೋಟಗಳ ಅಭಿವೃದ್ಧಿಗೆ ಸಹಾಯಧನವನ್ನು ಪಡೆಯಲು, ಒಟ್ಟು ಯೋಜನಾ ವೆಚ್ಚದ ಶೇ.20 ರಷ್ಟು ಬ್ಯಾಂಕ್ ಸಾಲ ಪಡೆಯಬೇಕಾಗುತ್ತದೆ. ಆದರೆ ಸರ್ಕಾರಿ ಕಂಪನಿಗಳು, ಬೆಳೆಗಾರರ ಸಹಕಾರಿ ಸಂಘಗಳು, ಸ್ವಸಹಾಯ ಗುಂಪುಗಳು, ಟ್ರಸ್ಟ್‌ಗಳಂತಹ ಸಂಸ್ಥೆಗಳಿಗೆ ಬ್ಯಾಂಕ್ ಸಾಲ ಕಡ್ಡಾಯವಿರುವುದಿಲ್ಲ. ಆದರೆ ಈ ಸಂಸ್ಥೆಗಳು ತಮ್ಮ ಸಂಸ್ಥೆಯಲ್ಲಿ ಈ ಉದ್ದೇಶಕ್ಕಾಗಿ ಸಾಕಷ್ಟು ಅನುದಾನ ಲಭ್ಯವಿರುವ ಬಗ್ಗೆ ಬ್ಯಾಂಕ್ ಪ್ರಮಾಣ ಪತ್ರ ಹಾಜರುಪಡಿಸಬೇಕು.

## 2.B ಕೊಯ್ಲೋತ್ತರ ಮತ್ತು ಸಂಸ್ಕರಣಾ ಘಟಕಗಳು

ಸಂಸ್ಕರಣಾ ಘಟಕ ಮತ್ತು ಮೌಲ್ಯವೃದ್ಧಿ (ಎಣ್ಣೆ ಸಂಸ್ಕರಣಾ ಘಟಕ, ದ್ರಾವ್ಯ ತೆಗೆಯುವ ಘಟಕ ಇತ್ಯಾದಿ) ಘಟಕಗಳ ಸ್ಥಾಪನೆಗೆ, ಯೋಜನೆಯ ಒಟ್ಟು ವೆಚ್ಚದ ಶೇ.25 ರಷ್ಟು, ಗರಿಷ್ಠ ರೂ.50.00 ಲಕ್ಷದ ವರೆಗೆ ಸಹಾಯಧನ ಪಡೆಯಲು ಅವಕಾಶವಿರುತ್ತದೆ. ಸಹಾಯಧನವನ್ನು ಸಾಲ ಪಡೆದ ಬ್ಯಾಂಕ್ ಖಾತೆಗೆ ಹೊಂದಿಸಲಾಗುವುದು. ಸ್ವಸಹಾಯ ಗುಂಪುಗಳು ಅಥವಾ ಔಷಧಿ ಬೆಳೆಗಾರರ ಸಹಕಾರಿ ಸಂಘಗಳು ಒಣಗಿಸುವ ಘಟಕಗಳು ಮತ್ತು ಶೇಖರಣಾ ಗೋದಾಮುಗಳನ್ನು, ಔಷಧಿ ಬೆಳೆಗಳ ಗೊಂಚಲು ಪ್ರದೇಶಗಳಲ್ಲಿ ನಿರ್ಮಿಸಿದಲ್ಲಿ, ಯೋಜನಾ ವೆಚ್ಚದ ಶೇ.100 ರಷ್ಟು, ಗರಿಷ್ಠ ರೂ.10.00 ಲಕ್ಷದ ವರೆಗೆ, ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. ಆದರೆ ಉದ್ಯಮಿಗಳು ಮತ್ತು ಬೆಳೆಗಾರರಿಗೆ ಸಹಾಯಧನದ ಪ್ರಮಾಣ ಶೇ.50 ರಷ್ಟು ಮಾತ್ರ ಲಭ್ಯವಾಗುವುದು.

## 2.C ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳು

ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ ಮತ್ತು ರಾಜ್ಯ ತೋಟಗಾರಿಕೆ ಇಲಾಖೆಗಳೊಂದಿಗೆ ಒಪ್ಪಂದ ಮಾಡಿಕೊಂಡು, ಸಾರ್ವಜನಿಕ–ಖಾಸಗಿ ಸಹಭಾಗಿತ್ವ (PPP Model) ದಲ್ಲಿ ಕಚ್ಚಾ ವಸ್ತುಗಳು ಮತ್ತು ಮೌಲ್ಯವರ್ಧಿತ ಪದಾರ್ಥಗಳ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲು, ಸಂಸ್ಥೆಗಳಿಗೆ ಯೋಜನಾ ವೆಚ್ಚದ ಶೇ.30 ರಷ್ಟು, ಗರಿಷ್ಠ ರೂ.30.00 ಲಕ್ಷದವರೆಗೆ ಸಹಾಯಧನ ಒದಗಿಸಲು ಅವಕಾಶ ಕಲ್ಪಿಸಲಾಗಿದೆ.

## 2.D ಪ್ರಚಾರ

ಮಾಧ್ಯಮಗಳ ಮೂಲಕ ಔಷದಿ ಬೆಳೆಗಳ ಮತ್ತು ಪದಾರ್ಥಗಳ ಮಾರುಕಟ್ಟೆ ಚಟುವಟಿಕೆಗಳಿಗೆ ಹೆಚ್ಚಿನ ಪ್ರಚಾರ ನೀಡುವುದು, ಪ್ರದರ್ಶನ ಮತ್ತು ಮೇಳಗಳಲ್ಲಿ ಭಾಗವಹಿಸುವುದು, ಪ್ರದರ್ಶಿಕೆಗಳ ತಯಾರಿ ಅಥವಾ ಬಾಡಿಗೆ ಆಧಾರದ ಮೇಲೆ ಪಡೆಯುವುದು ಇತ್ಯಾದಿ ಚಟುವಟಿಕೆಗಳಿಗೆ ಯೋಜನಾ ವೆಚ್ಚದ ಶೇ.50 ರಷ್ಟು ಗರಿಷ್ಠ ರೂ.10.00 ಲಕ್ಷದವರೆಗೆ ಸಹಾಯಧನ ಪಡೆಯಬಹುದಾಗಿರುತ್ತದೆ.

ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಗುಣಮಟ್ಟ ಪರೀಕ್ಷೆ ಪ್ರಯೋಗಾಲಯಗಳ ಸ್ಥಾಪನೆಗೆ ಬ್ಯಾಂಕ್ ಸಾಲ ಪಡೆಯುವುದು ಕಡ್ಡಾಯವಾಗಿರುತ್ತದೆ. ಆದರೆ ಬೆಳೆಗಾರರ ಸಹಕಾರಿ ಸಂಘಗಳು, ಸಾರ್ವಜನಿಕ ಸಂಸ್ಥೆಗಳು, ಟ್ರಸ್ಟ್‌ಗಳಿಗೆ ಇದು ಕಡ್ಡಾಯವಾಗಿರುವುದಿಲ್ಲ. ಆದಾಗ್ಯೂ ಈ ಸಂಸ್ಥೆಗಳು ಯೋಜನೆಯಡಿ ಸ್ಥಾಪಿಸಲಾಗುವ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಸಾಕಷ್ಟು ಹಣಕಾಸು ಲಭ್ಯವಿರುವ ಕುರಿತು ಬ್ಯಾಂಕ್ ದೃಢೀಕರಣ ನೀಡತಕ್ಕದ್ದು.

## 3. ರಾಷ್ಟ್ರೀಯ ಔಷಧಿ ಬೆಳೆಗಳ ಮಿಷನ್ ಅಡಿ ಘಟಕವಾರು ಸಹಾಯಧನದ ವಿವರಗಳು

| ಕ್ರ.ಸಂ. | ಕಾರ್ಯಕ್ರಮ | ಅಂದಾಜು ವೆಚ್ಚ | ಸಹಾಯಧನದ ಪ್ರಮಾಣ |
|---|---|---|---|
| **1.** ನರ್ಸರಿ: ಗುಣಮಟ್ಟದ ಸಸಿ/ ಕಸಿ ಗಿಡಗಳ ಉತ್ಪಾದನೆ | | | |
| | **(a)** ಸಾರ್ವಜನಿಕ ವಲಯ | | |
| | (i) ಮಾದರಿ ನರ್ಸರಿ (4 ಹೆ.) | ರೂ.20.00 ಲಕ್ಷಗಳು | ಗರಿಷ್ಠ ರೂ.20.00 ಲಕ್ಷಗಳು |
| | (ii) ಸಣ್ಣ ನರ್ಸರಿ (1 ಹೆ.) | ರೂ.4.00 ಲಕ್ಷಗಳು | ಗರಿಷ್ಠ ರೂ.4.00 ಲಕ್ಷಗಳು |
| | **(b)** ಖಾಸಗಿ ವಲಯ | | |
| | (i) ಮಾದರಿ ನರ್ಸರಿ (4 ಹೆ.) | ರೂ.20.00 ಲಕ್ಷಗಳು | ಒಟ್ಟು ಯೋಜನಾ ವೆಚ್ಚದ ಶೇ.50 ರಷ್ಟು ಸಹಾಯಧನ, ಗರಿಷ್ಠ ರೂ.10.00 ಲಕ್ಷಗಳು |
| | (ii) ಸಣ್ಣ ನರ್ಸರಿ (1 ಹೆ.) | ರೂ.4.00 ಲಕ್ಷಗಳು | ಒಟ್ಟು ಯೋಜನಾ ವೆಚ್ಚದ ಶೇ.50 ರಷ್ಟು ಸಹಾಯಧನ, ಗರಿಷ್ಠ ರೂ.2.00 ಲಕ್ಷಗಳು |
| **2.** ಪ್ರದೇಶ ವಿಸ್ತರಣೆ | | | |
| | (i) ತೀರಾ ಅಳಿವಿನಂಚಿನಲ್ಲಿರುವ ಮತ್ತು AYUSH ಕ್ಷೇತ್ರದಿಂದ ಬಾರಿ ಬೇಡಿಕೆಯಲ್ಲಿರುವ ಬೆಳೆಗಳು | ಅನುಬಂಧ–2 | ಉತ್ಪಾದನಾ ವೆಚ್ಚದ ಶೇ.75 |
| | (ii) ಅಳಿವಿನಂಚಿನಡೆಗೆ ಸಾಗುತ್ತಿರುವ ಮತ್ತು ಉತ್ಪಾದನೆಯ ಪ್ರಮಾಣ ಕಡಿಮೆಯಾಗುತ್ತಿರುವ ಬೆಳೆಗಳು | ಅನುಬಂಧ–2 | ಉತ್ಪಾದನಾ ವೆಚ್ಚದ ಶೇ.50 |
| | (iii) AYUSH ಕ್ಷೇತ್ರದಿಂದ ಬೇಡಿಕೆಯಲ್ಲಿರುವ ಮತ್ತು ರಫ್ತಾಗುತ್ತಿರುವ ಬೆಳೆಗಳು | ಅನುಬಂಧ–2 | ಉತ್ಪಾದನಾ ವೆಚ್ಚದ ಶೇ.20 |
| | (iv) ಅನುಬಂಧ–2 ರಲ್ಲಿ ನಮೂದಿಸಲಾಗಿರುವ 93 ಬೆಳೆಗಳ ಸರಾಸರಿ ಸಹಾಯಧನದ ಪ್ರಮಾಣ | | ಶೇ.30 |
| **3.** ಕೊಯ್ಲೋತ್ತರ ನಿರ್ವಹಣೆ | | | |
| | (i) ಒಣಗಿಸುವ ಘಟಕಗಳು | ರೂ.5.00 ಲಕ್ಷಗಳು | ಸಾರ್ವಜನಿಕ/ಸಹಕಾರಿ/ಸ್ವಸಹಾಯ ಗುಂಪುಗಳಿಗೆ ಶೇ.100 ಮತ್ತು ಖಾಸಗಿ ವಲಯಕ್ಕೆ ಶೇ.50 ರಷ್ಟು ಸಹಾಯಧನ |
| | (ii) ಶೇಖರಣಾ ಗೋದಾಮುಗಳು | ರೂ.5.00 ಲಕ್ಷಗಳು | ಸಾರ್ವಜನಿಕ/ಸಹಕಾರಿ/ಸ್ವಸಹಾಯ ಗುಂಪುಗಳಿಗೆ ಶೇ.100 ಮತ್ತು ಖಾಸಗಿ ವಲಯಕ್ಕೆ ಶೇ.50 ರಷ್ಟು ಸಹಾಯಧನ |

| | | | |
|---|---|---|---|
| **4. ಸಂಸ್ಕರಣೆ ಮತ್ತು ಮೌಲ್ಯ ವರ್ಧನೆ** | | | |
| | (i) ಸಂಸ್ಕರಣಾ ಘಟಕಗಳು | ರೂ.200.00 ಲಕ್ಷಗಳು | ಯೋಜನಾ ವೆಚ್ಚದ ಶೇ.25, ಗರಿಷ್ಠ ರೂ.50.00 ಲಕ್ಷಗಳು |
| | (ii) ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳು | ರೂ.100.00 ಲಕ್ಷಗಳು | ಯೋಜನಾ ವೆಚ್ಚದ ಶೇ.30, ಗರಿಷ್ಠ ರೂ.30.00 ಲಕ್ಷಗಳು |
| | (iii) ಮಾರುಕಟ್ಟೆ ಉತ್ತೇಜನ | ರೂ.10.00 ಲಕ್ಷಗಳು | ಯೋಜನಾ ವೆಚ್ಚದ ಶೇ.50, ಗರಿಷ್ಠ ರೂ.5.00 ಲಕ್ಷಗಳು |
| | (iv) ಮಾರುಕಟ್ಟೆ ಇಂಟೆಲಿಜೆನ್ಸ್ | ಯೋಜನಾಧಾರಿತ | ಯೋಜನಾಧಾರಿತ |
| | (v) ಮರು ಖರೀದಿ ಒಪ್ಪಂದ | ಯೋಜನಾಧಾರಿತ | ಯೋಜನಾಧಾರಿತ |
| | (vi) ಮಾರುಕಟ್ಟೆ ಮೂಲಭೂತ ಸೌಕರ್ಯ | - ಗ್ರಾಮೀಣ ಮಾರುಕಟ್ಟೆ ಮಂಡಿಗಳಿಗೆ ರೂ.10.00 ಲಕ್ಷಗಳು.<br>- ಜಿಲ್ಲಾ ಮಾರುಕಟ್ಟೆ ಮಂಡಿಗಳಿಗೆ ರೂ.200.00 ಲಕ್ಷಗಳು | ಯೋಜನಾಧಾರಿತ ಸರ್ಕಾರಿ/ಸಹಕಾರಿ/ಸ್ವಸಹಾಯ ಗುಂಪುಗಳಿಗೆ ಶೇ.100 ರಷ್ಟು ಸಹಾಯಧನ |
| | (vii) ಗುಣಮಟ್ಟ ಪರೀಕ್ಷಾ ಶುಲ್ಕ/ ಮರುಪಾವತಿ | ಪರೀಕ್ಷಾ ವೆಚ್ಚದ ಶೇ.50, ಗರಿಷ್ಠ ರೂ.5000/– | ಪರೀಕ್ಷಾ ವೆಚ್ಚದ ಶೇ.50, ಗರಿಷ್ಠ ರೂ.5000/- |
| | (viii) ಸಾವಯವ ದೃಢೀಕರಣ/GAP ದೃಢೀಕರಣ | 50 ಹೆ. ಗೊಂಚಲಿಗೆ | ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮಾರ್ಗಸೂಚಿಯಂತೆ |
| | (ix) ಬೆಳೆ ವಿಮೆ | ಕಂತಿನ ಶೇ.50 ರಷ್ಟು | |
| **5. ಯೋಜನಾ ನಿರ್ವಹಣೆ** | | | |
| | (i) ರಾಜ್ಯ ಮತ್ತು ಜಿಲ್ಲಾ ಮಟ್ಟದ ಅನುಷ್ಠಾನ ಏಜೆನ್ಸಿಗಳ ನಿರ್ವಹಣೆ (ಹೆಚ್ಚುವರಿ ಸಿಬ್ಬಂದಿ ಯನ್ನೊಳಗೊಂಡು) | | ಯೋಜನೆಯ ಒಟ್ಟಾರೆ ಖರ್ಚಿನ ಶೇ.5 ರಷ್ಟನ್ನು ಯೋಜನಾ ನಿರ್ವಹಣಾ ವೆಚ್ಚಕ್ಕೆ ವ್ಯಯಿಸಬಹುದು. ಯೋಜನಾ ನಿರ್ವಹಣಾ ಸಲಹೆಗಾರರು ಮತ್ತು ಗುತ್ತಿಗೆ ಸಿಬ್ಬಂಧಿಯ ಸಂಬಳವನ್ನು ಈ ಘಟಕದಡಿ ಭರಿಸಬಹುದಾಗಿರುತ್ತದೆ. |
| | (ii) ಯೋಜನಾ ವರದಿ ತಯಾರಿ, ಆಡಳಿತಾತ್ಮಕ ವೆಚ್ಚಗಳಾದಂತಹ ವಾಹನ ಬಾಡಿಗೆ, ಪ್ರಯಾಣ ವೆಚ್ಚ, ಕಛೇರಿ ವೆಚ್ಚ, ಯಂತ್ರಾಂಶ ಮತ್ತು ತಂತ್ರಾಂಶ ವೆಚ್ಚಗಳು ಇತ್ಯಾದಿ | ಯೋಜನಾಧಾರಿತ | ಯೋಜನೆಯ ನಿರ್ವಹಣಾ ವೆಚ್ಚ (ಖರ್ಚಿನ ಶೇ.5 ರಷ್ಟು) ದಲ್ಲೇ ಭರಿಸುವುದು. |
| | (iii) ಯೋಜನಾ ಸಂಬಂಧಿತ ಇತರೆ ಖರ್ಚುಗಳು<br>– ದೇಶದ ಒಳಗೆ ಮತ್ತು ಹೊರಗೆ ಪ್ರವಾಸ ಕಾರ್ಯಕ್ರಮ | ಯೋಜನಾಧಾರಿತ | ಯೋಜನೆಯ ನಿರ್ವಹಣಾ ವೆಚ್ಚ (ಖರ್ಚಿನ ಶೇ.5 ರಷ್ಟು) ದಲ್ಲೇ ಭರಿಸುವುದು. |

# ಅಧ್ಯಾಯ–7

## ಕ್ರಿಯಾ ಯೋಜನೆ ತಯಾರಿ ಮತ್ತು ಅನುಮೋದನೆ ಪ್ರಕ್ರಿಯೆ

ರಾಜ್ಯ ಸರ್ಕಾರಗಳು ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿ ಮಾರ್ಗಸೂಚಿಯನ್ವಯ, ಕ್ರಿಯಾ ಯೋಜನೆ ತಯಾರಿಸಿ, ಅಭಿವೃದ್ಧಿ ಆಯುಕ್ತರು ಅಧ್ಯಕ್ಷರಾಗಿರುವ ರಾಜ್ಯ ಮಟ್ಟದ ಔಷಧಿ ಬೆಳೆಗಳ ಮಿಷನ್ ಅನುಷ್ಠಾನ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದು, ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಗೆ ಸಲ್ಲಿಸುವುದು. ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯು ಈ ಕ್ರಿಯಾ ಯೋಜನೆಯನ್ನು ಮೊದಲು ತಾಂತ್ರಿಕ ಸಲಹಾ ಸಮಿತಿಯ ಪರಿಶೀಲನೆಗೊಳಪಡಿಸಿ, ನಂತರ ಹಣಕಾಸು ಸ್ಥಾಯಿ ಸಮಿತಿಗೆ ಅಂತಿಮ ಅನುಮೋದನೆಗಾಗಿ ಮಂಡಿಸಲಾಗುತ್ತದೆ. ಅನುಮೋದನೆಯ ನಂತರ ಅನುದಾನವನ್ನು ರಾಜ್ಯ ಅನುಷ್ಠಾನ ಏಜೆನ್ಸಿಗಳಿಗೆ ಬಿಡುಗಡೆ ಮಾಡಲಾಗುತ್ತದೆ.

ಜಿಲ್ಲೆಗಳ ಅನುಮೋದಿತ ಕ್ರಿಯಾ ಯೋಜನೆಯನ್ವಯ, ರಾಜ್ಯ ಮಿಷನ್ ಏಜೆನ್ಸಿವತಿಯಿಂದ ತೋಟಗಾರಿಕೆ ಉಪ ನಿರ್ದೇಶಕರುಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುವುದು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಫಲಾನುಭವಿಗಳು/ ಸಂಘ ಸಂಸ್ಥೆಗಳಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮಾದರಿಯಲ್ಲಿ ಸಹಾಯಧನ ವಿತರಿಸುವುದು. ಬ್ಯಾಂಕ್ ಸಾಲಪಡೆದು ಅನುಷ್ಠಾನಗೊಳಿಸಲಾದ ಘಟಕಗಳಿಗೆ, ಘಟಕದ ತಾಂತ್ರಿಕ ಪರಿಶೀಲನೆ ನಡೆಸಿ, ಸಂಬಂಧಪಟ್ಟ ಬ್ಯಾಂಕ್ ವತಿಯಿಂದ ಕೆಲಸ ಪೂರ್ಣಗೊಂಡ ದೃಢೀಕರಣ ಪಡೆದ ನಂತರವೇ, ಒಂದೇ ಕಂತಿನಲ್ಲಿ ಸಹಾಯಧನವನ್ನು ಬ್ಯಾಂಕ್ ಖಾತೆಗೆ ಜಮೆಗೊಳಿಸುವುದು. ಫಸಲು ಬಿಡಲು ಹೆಚ್ಚು ಸಮಯ ತೆಗೆದುಕೊಳ್ಳುವ ಬೆಳೆಗಳಿಗೆ ಮತ್ತು ದೊಡ್ಡ ಮೊತ್ತದ ಮೂಲಭೂತ ಸೌಕರ್ಯ ಯೋಜನೆಗಳಿಗೆ ಅನುದಾನವನ್ನು ಒಂದಕ್ಕಿಂತ ಹೆಚ್ಚು ಕಂತುಗಳಲ್ಲಿ ಬಿಡುಗಡೆಗೊಳಿಸಲು ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು.

# ಅಧ್ಯಾಯ-8
## ಯೋಜನಾ ನಿರ್ವಹಣೆ, ಮೇಲುಸ್ತುವಾರಿ ಮತ್ತು ಮೌಲ್ಯಮಾಪನ

**ಯೋಜನಾ ನಿರ್ವಹಣೆ:**

ರಾಜ್ಯದ ಅನುಮೋದಿತ ಕಾರ್ಯಕ್ರಮದಡಿ, ಒಟ್ಟು ಖರ್ಚಿನ ಶೇ.5 ರಷ್ಟು ಅನುದಾನವನ್ನು ಯೋಜನಾ ನಿರ್ವಹಣೆಗಾಗಿ ವ್ಯಯಿಸಲು ಅವಕಾಶ ನೀಡಲಾಗಿರುತ್ತದೆ. ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರುಗಳು ತಮ್ಮ ಜಿಲ್ಲೆಯ ಅನುಮೋದಿತ ಕಾರ್ಯಕ್ರಮದಡಿ, ಒಟ್ಟು ಖರ್ಚಿನ ಶೇ.3 ರಷ್ಟನ್ನು ಯೋಜನಾ ನಿರ್ವಹಣೆಗೆ ಬಳಸಿಕೊಳ್ಳಲು ಅನುಮತಿಸಲಾಗಿದೆ. ಈ ಅನುದಾನವನ್ನು ಯೋಜನೆಯ ಅನುಷ್ಠಾನ ಉದ್ದೇಶಕ್ಕೆ ಗುತ್ತಿಗೆ ಆಧಾರದ ಮೇಲೆ ಪಡೆಯುವ ಸಲಹೆಗಾರರು/ ಗಣಕಯಂತ್ರ ಸಿಬ್ಬಂಧಿರವರ ಸಂಬಳ, ಆಡಳಿತಾತ್ಮಕ ಖರ್ಚುಗಳು, ಪ್ರಯಾಣ ವೆಚ್ಚದಂತಹ ಯೋಜನೆ ನಿರ್ವಹಣೆ ವೆಚ್ಚಗಳಿಗೆ ಬಳಸಬಹುದಾಗಿರುತ್ತದೆ. ಪ್ರತಿ ವರ್ಷದ ಕ್ರಿಯಾ ಯೋಜನೆಯಲ್ಲಿ ಯೋಜನಾ ನಿರ್ವಹಣಾ ವೆಚ್ಚಕ್ಕೂ ಅವಕಾಶ ಕಲ್ಪಿಸಿಕೊಳ್ಳುವುದು.

**ಮೇಲುಸ್ತುವಾರಿ ಮತ್ತು ಮೌಲ್ಯಮಾಪನ**

ಯೋಜನೆಯ ಮೌಲ್ಯಮಾಪನವನ್ನು 11 ನೇ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಕೈಗೊಳ್ಳುವುದು. ಮಿಷನ್‌ನ ಸಮಂಜಸ ಯೋಜನೆ ಸಿದ್ಧಪಡಿಸುವುದು ಮತ್ತು ಪರಿಣಾಮಕಾರಿ ಅನುಷ್ಠಾನಕ್ಕೆ ಅನುವಾಗುವಂತೆ ತಾಂತ್ರಿಕ ಮತ್ತು ನಿರ್ವಹಣಾ ಸಲಹೆಗಾರರು, ಸಹಾಯಕರು ಮತ್ತು ದಾಖಲಾತಿ ನಿರ್ವಹಣಾ ಸಿಬ್ಬಂಧಿಗಳನ್ನು ರಾಜ್ಯಮಟ್ಟದಲ್ಲಿ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಯೋಜನೆಯ ಮೇಲುಸ್ತುವಾರಿ, ಪರಿವೀಕ್ಷಣೆ ಮತ್ತು ಮೌಲ್ಯಮಾಪನವನ್ನು ಪರಿಣಿತ ಸ್ವತಂತ್ರ ಏಜೆನ್ಸಿವತಿಯಿಂದ ಮಾಡಿಸಲು ಕ್ರಮ ಕೈಗೊಳ್ಳಲಾಗುವುದು. ಯೋಜನೆಯ ಮಧ್ಯಕಾಲಿನ ಮೌಲ್ಯ ಮಾಪನವನ್ನು ಸಹ 2 ಅನುಷ್ಠಾನ ವರ್ಷಗಳ ನಂತರ ಮಾಡಿಸಲಾಗುವುದು.

ಅನುದಾನ ಲಭ್ಯತೆ ಮತ್ತು ರಾಜ್ಯ ಸರ್ಕಾರದ ಪ್ರಸ್ತಾವನೆಗಳನ್ನಾಧರಿಸಿ, ರಾಜ್ಯಕ್ಕೆ ಆರ್ಥಿಕ ಮತ್ತು ಭೌತಿಕ ಗುರಿ ನಿಗಧಿಪಡಿಸಲಾಗುವುದು. ರಾಜ್ಯಗಳಲ್ಲಿ ವಾಸ್ತವಿಕವಾಗಿ ಸಾಧಿಸಲಾದ ಭೌತಿಕ ಪ್ರಗತಿ ಮತ್ತು ಸಮನಾಂತರ ಆರ್ಥಿಕ ಸಾಧನೆಗಳನ್ನಾಧರಿಸಿ, ಲಭ್ಯವಿರುವ ಅನುದಾನದ ಮಿತಿಯೊಳಗೆ, ಗುರಿಗಳನ್ನು ನಿಗಧಿಪಡಿಸುವ / ಪರಿಷ್ಕರಿಸುವ ಸಂಪೂರ್ಣ ಅಧಿಕಾರ, ರಾಷ್ಟ್ರೀಯ ಔಷಧಿ ಬೆಳೆಗಳ ಮಂಡಳಿಯ ಹಣಕಾಸು ಸ್ಥಾಯಿ ಸಮಿತಿಗೆ ಇರುತ್ತದೆ.

**ಯೋಜನೆಯ ಅಂತ್ಯದಲ್ಲಿ ಈ ಕೆಳಗಿನ ದ್ಯೆಯೋದ್ದೇಶಗಳನ್ನು ಸಾಧಿಸಲು ಉದ್ದೇಶಿಸಲಾಗಿರುತ್ತದೆ.**

- 1 ಲಕ್ಷ ಹೆಕ್ಟೇರ್ ಪ್ರದೇಶ ವಿಸ್ತರಣೆ.
- 2 ಲಕ್ಷಟನ್‌ನಷ್ಟು ಔಷಧಿ ಬೆಳೆ ಉತ್ಪಾದನೆ ಹೆಚ್ಚಳ.
- ಅರಣ್ಯ ಮೂಲದ ಕಚ್ಚಾ ಸಾಮಗ್ರಿಗಳ ಮೇಲಿನ ಅವಲಂಭನೆಯನ್ನು ಶೇ.50 ರಷ್ಟು ಕಡಿಮೆಗೊಳಿಸುವುದು.
- ರಫ್ತಿನ ಒಟ್ಟು ಪ್ರಮಾಣದಲ್ಲಿ ಮೌಲ್ಯವರ್ಧಿತ ಪದಾರ್ಥಗಳ ಪಾಲನ್ನು ಹೆಚ್ಚಿಸುವುದು.
- 6 ಕೋಟಿ ಮಾನವ ದಿನಗಳ ಉದ್ಯೋಗ ಸೃಷ್ಟಿಸುವುದು.